ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

24 ಫೆಬ್ರವರಿ 2026 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 340 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ಟಿ-20 ವಿಶ್ವಕಪ್‌ನ ಸೂಪರ್8 ಪಂದ್ಯದಲ್ಲಿ ಜಿಂಬಾಬ್ವೆ ಬೌಲರ್‌ಗಳ ಬೆವರಿಳಿಸಿದ ವೆಸ್ಟ್ ಇಂಡೀಸ್ ತಂಡವು 20 ಓವರ್‌ಗಳ ಅಂತ್ಯಕ್ಕೆ 6 ವಿಕೆಟ್ ನಷ್ಟಕ್ಕೆ 254 ರನ್ ಗಳಿಸಿದೆ. ಇದು ಟಿ-20 ವಿಶ್ವಕಪ್‌ನಲ್ಲಿ 2ನೇ ಅತಿದೊಡ್ಡ ಮೊತ್ತವಾಗಿದೆ.

ಎಐ ಯುಗ : ಅವಕಾಶಗಳು, ಸವಾಲುಗಳು ಮತ್ತು ಭಾರತದ ಪಾತ್ರ » 2

ರೈತರಿಗೆ ವಿದ್ಯುತ್ ಸಮಸ್ಯೆ ಯಾಗದಂತೆ ಗಮನ ಹರಿಸಿ » 3

15ನೇ ಹಣಕಾಸು ಯೋಜನೆ ಹಣ ಮಾ.15ರೊಳಗೆ ಬಳಕೆಯಾಗಲಿ

ಸಂಪುಟದಲ್ಲಿ ಹೊಸಬರಿಗೆ ಅವಕಾಶ ನೀಡಿ

31 ಶಾಸಕರಿಂದ ಹೈಕಮಾಂಡ್‌ಗೆ ಪತ್ರ | ನಾಯಕತ್ವ ಬದಲಾವಣೆ ನಡುವೆ ಸಂಪುಟ ಪುನರ್ ರಚನೆಗೆ ಆಗ್ರಹ

• ಪ್ರಜೋದಯ ವರದಿ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ಚರ್ಚೆಯ ಬೆನ್ನಲ್ಲೇ, ಸಚಿವ ಸಂಪುಟ ಪುನರ್‌ರಚನೆ ಮಾಡಬೇಕೆಂದು ಆಗ್ರಹಿಸಿ ಮೊದಲ ಬಾರಿಗೆ ಆಯ್ಕೆಯಾಗಿರುವ 31 ಶಾಸಕರು ಹೈಕಮಾಂಡ್ ನಾಯಕರಿಗೆ ಪತ್ರ ಬರೆದಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ರಾಜ್ಯದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಈ ಪತ್ರವನ್ನು ರವಾನಿಸಲಾಗಿದೆ. 31 ಶಾಸಕರ ಸಹಿ ಪತ್ರದಲ್ಲಿದೆ. ಆದರೆ, ಪತ್ರದಲ್ಲಿ ದಿನಾಂಕ ಉಲ್ಲೇಖ ಮಾಡಿಲ್ಲ. ಹೈಕಮಾಂಡ್ ನಾಯಕರಿಗೆ ಈ ಪತ್ರ ತಲುಪಿದೆಯೇ ಎಂಬ ಬಗ್ಗೆಯೂ ಸ್ಪಷ್ಟತೆ ಇಲ್ಲ.

ಪತ್ರದಲ್ಲಿ ಏನಿದೆ?

ಕಾಂಗ್ರೆಸ್‌ನಲ್ಲಿ 38 ಶಾಸಕರು ಹೊಸದಾಗಿ ಗೆದ್ದಿದ್ದೇವೆ. ಬೇರೆ ರಾಜ್ಯಗಳಲ್ಲಿ ಮೊದಲ ಬಾರಿಗೆ ಗೆದ್ದವರು ಮುಖ್ಯಮಂತ್ರಿ ಆಗಿದ್ದಾರೆ. ಕನಿಷ್ಠ ಎಂಟು ಶಾಸಕರಿಗೆ ಸಚಿವ ಸ್ಥಾನ ನೀಡಬೇಕೆಂದು ಪತ್ರದಲ್ಲಿ ಮನವಿ ಮಾಡಲಾಗಿದೆ.

ಮೊದಲ ಬಾರಿಗೆ ಶಾಸಕರಾದವರಿಗೆ ಸಂಪುಟದಲ್ಲಿ ಅವಕಾಶ ನೀಡುವುದರಿಂದ ಯುವ ಮುಖಗಳಿಗೆ ಅವಕಾಶ ಸಿಕ್ಕಂತಾಗುತ್ತದೆ. ನಾವು ಕಾಂಗ್ರೆಸ್ ಪಕ್ಷದ ತತ್ವ, ಸಿದ್ಧಾಂತಕ್ಕೆ ಬದ್ಧರಾಗಿದ್ದೇವೆ. 2028ರಲ್ಲಿ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಆಡಳಿತಕ್ಕೆ ಬರಬೇಕಾಗಿದೆ. ಹೀಗಾಗಿ, ಸಂಪುಟದಲ್ಲಿ ಯುವ ಮುಖಗಳಿಗೆ ಅವಕಾಶ ನೀಡಬೇಕೆಂದು ಪ್ರತಿಪಾದಿಸಲಾಗಿದೆ.

ಈ ಬಗ್ಗೆ ರಾಮನಗರದ ಶಾಸಕ ಇಕ್ಬಾಲ್ ಹುಸೇನ್ ಪ್ರತಿಕ್ರಿಯಿಸಿ, ನಾನು ಪತ್ರಕ್ಕೆ ಸಹಿ ಮಾಡಿದ್ದು ನಿಜ. 30 ರಿಂದ 40 ಶಾಸಕರು ಸಹಿ ಮಾಡಿದ್ದೇವೆ. ಈಗಿನ ಸಚಿವರಿಂದ ಕೆಲಸ ಆಗುತ್ತಿಲ್ಲ. ಇಷ್ಟೆ ಇದ್ದವರಿಗೆ ಮಂತ್ರಿ ಸ್ಥಾನ ನೀಡಬೇಕೆಂದು ಮನವಿ ಮಾಡಿದ್ದೇನೆಂದು ತಿಳಿಸಿದರು.

ಬಳ್ಳಾರಿಯ ಶಾಸಕ ನಾರಾ ಭರತ್ ರೆಡ್ಡಿ ಅವರು ಮಾತನಾಡಿ, ಸಚಿವ ಸಂಪುಟ ವಿಸ್ತರಣೆ ವೇಳೆ ಪಕ್ಷ ಸಂಘಟನೆ ದೃಷ್ಟಿಯಿಂದ ಹೊಸಬರಿಗೆ ಅವಕಾಶ ಕೊಡಬೇಕೆಂದು ಕೇಳಿದ್ದೇವೆ. ಹೊಸಬರಿಗೆ ಅವಕಾಶ ನೀಡಿದರೆ ಮುಂದೆ ಅವರಿಗೂ ಅನುಭವ ಆಗಲಿದೆ. ಬಳ್ಳಾರಿ ವಿಚಾರದಲ್ಲಿ ನಾಗೇಂದ್ರ ಅವರಿಗೆ ಮಂತ್ರಿ ಸ್ಥಾನ ಕೊಡಬೇಕೆಂದು ಹೇಳಿದರು.

ಸಂಪುಟ ಪುನರ್ ರಚನೆಯ ದಾಳ

ರಾಜ್ಯ ರಾಜಕೀಯದಲ್ಲಿ ನಾಯಕತ್ವ ಬದಲಾವಣೆಯ ಗುಸುಗುಸು ಮತ್ತು ಗೊಂದಲಗಳು ಜೋರಾಗಿರುವ ಸಮಯದಲ್ಲೇ ದಲಿತ ಮುಖ್ಯಮಂತ್ರಿ ಕೂಗು ಕೇಳಿ ಬಂದಿದೆ. ದಲಿತ ಮುಖ್ಯಮಂತ್ರಿ ಕಾಂಗ್ರೆಸ್ ನಿಂದ ಮಾತ್ರವೆಂಬ ಸಿದ್ದರಾಮಯ್ಯ ಅವರ ಸಂದೇಶ ರಾಜ್ಯ ರಾಜಕೀಯದಲ್ಲಿ ಸಂಚಲನ ಮೂಡಿಸಿದೆ. ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಪಟ್ಟದ ಪಟ್ಟು ಜೋರಾಗಿದ್ದರಿಂದ ಸಿದ್ದರಾಮಯ್ಯ ದಲಿತ ಮುಖ್ಯಮಂತ್ರಿ ದಾಳ ಉರುಳಿಸಿದ್ದಾರೆಯೇ ಎಂಬ ಚರ್ಚೆಗಳು ಶುರುವಾಗಿವೆ. ಈ ಎಲ್ಲಾ ಬೆಳವಣಿಗೆಗಳ ಮಧ್ಯೆ, ಶಾಸಕರ ಪತ್ರಯಾವ ಸ್ವರೂಪ ಪಡೆದುಕೊಳ್ಳಲಿದೆ ಎನ್ನುವುದೇ ಕುತೂಹಲ ಮೂಡಿಸಿದೆ.

ಪತ್ರಕ್ಕೆ ಸಹಿ ಹಾಕಿರುವ ಶಾಸಕರು

ಶಿವಗಂಗಾ ಬಸವರಾಜ್-ಚನ್ನಗಿರಿ ಶಾಸಕ, ಇಕ್ಬಾಲ್ ಹುಸೇನ್-ರಾಮನಗರ, ಮಂಥರ್ ಗೌಡ-ಮಡಿಕೇರಿ, ಎ.ಎಸ್ ಪೊನ್ನಣ್ಣ-ವಿರಾಜಪೇಟೆ, ನಯನಾ ಮೋಟಮ್ಮ-ಮೂಡಿಗೆರೆ, ದರ್ಶನ್ ಧ್ರುವನಾರಾಯಣ್-ನಂಜನಗೂಡು, ರವಿಶಂಕರ್- ಕೃಷ್ಣರಾಜನಗರ, ಗಣಿಗ ರವಿ-ಮಂಡ್ಯ, ಅಶೋಕ್ ರೈ-ಪುತ್ತೂರು, ಕೆ.ಎಸ್.ಆನಂದ್- ಕಡೂರು, ದೇವೇಂದ್ರಪ್ಪ-ಜಗಳೂರು, ಎ.ಸಿ ಶ್ರೀನಿವಾಸ್-ಪುಲಿಕೇಶಿ ನಗರ, ನಾರಾ ಭರತ್ ರೆಡ್ಡಿ -ಬಳ್ಳಾರಿ ನಗರ, ಪ್ರಕಾಶ್ ಕೋಳಿವಾಡ-ರಾಣೆಬೆನ್ನೂರು, ಬಿ.ಬಿ.ಚಿಮ್ಮನಕಟ್ಟಿ-ಬಾದಾಮಿ, ಬಾಬಸಾಹೇಬ್ ಪಾಟೀಲ್-ಕಿತ್ತೂರು, ವಿಶ್ವಾಸ್ ವೈದ್ಯ-ಸವದತ್ತಿ, ಮಹೇಂದ್ರ ತಮ್ಮಣ್ಣನವರ್- ಕುಡಚಿ, ಉದಯ್ ಗೌಡ- ಮದ್ದೂರು, ಚನ್ನಾರೆಡ್ಡಿ ಪಾಟೀಲ್ -ಯಾದಗಿರಿ, ವೇಣುಗೋಪಾಲ್ ನಾಯ್ಕ್-ಸುರಪುರ ಶಾಸಕ ಪತ್ರಕ್ಕೆ ಸಹಿ ಹಾಕಿದ್ದಾರೆ.

ರಂಜಾನ್-ಹೋಳಿ ಹಬ್ಬ: ರಾಜ್ಯಾದ್ಯಂತ ಕಟ್ಟೆಚ್ಚರ

• ಪ್ರಜೋದಯ ವರದಿ

ಬೆಂಗಳೂರು: ರಾಜ್ಯದಲ್ಲಿ ರಂಜಾನ್ ಮತ್ತು ಹೋಳಿ ಹಬ್ಬದ ಹಿನ್ನಲೆಯಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಲು ರಾಜ್ಯ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಸೂಚಿಸಿದ್ದಾರೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಂಜಾನ್ ಹಾಗು ಹೋಳಿ ಹಬ್ಬ ಆಚರಣೆ ವೇಳೆ ಯಾರೂ ಕಾನೂನು ಕೈಗೆತ್ತಿಕೊಳ್ಳಲು ಅವಕಾಶ ಕೊಡಬಾರದು. ಸಂತೋಷದಿಂದ ಹಬ್ಬ ಆಚರಿಸಬೇಕು. ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ನಡೆಸಲು ಅವಕಾಶವಿಲ್ಲ. ಅದಕ್ಕೆ ಅವಕಾಶ ಕೊಡುವುದೂ ಇಲ್ಲವೆಂದರು.

ಕಳೆದ ಒಂದು ತಿಂಗಳಿನಿಂದ ಪ್ರತಿ ಜಿಲ್ಲೆಯಲ್ಲಿ ಅಕ್ರಮ ಬಾಂಗ್ಲಾ ವಲಸಿಗರ ಪತ್ತೆಗೆ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ. ಕಾಫಿ ತೋಟ, ಕಟ್ಟಡಗಳಲ್ಲಿ ಕೆಲಸ ಮಾಡುತ್ತಾರೆಂಬುದನ್ನು ಕೂಡ ವಿಪಕ್ಷದವರು ಹೇಳಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿ, ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಪ್ರತಿ ಪೊಲೀಸ್ ಠಾಣೆ ಹಂತದಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ನೀಡಲಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯದ ಅಡಿಪಾಯವೇ ಸಾಮಾಜಿಕ ನ್ಯಾಯ. ಆ ಸಿದ್ಧಾಂತದ ಮೇಲೆ ರಾಜಕೀಯ ಮಾಡಿಕೊಂಡು ಬಂದಿದ್ದಾರೆ. ಅದರಲ್ಲಿ ಹೊಸದೇನು ಇಲ್ಲ. ಹಿಂದಿನಿಂದಲೂ ಸಾಮಾಜಿಕ ನ್ಯಾಯದ ಪರವಾಗಿದ್ದಾರೆ. ಅವರ ರಾಜಕೀಯದ ಅಡಿಪಾಯವೇ ಸಾಮಾಜಿಕ ನ್ಯಾಯವೆಂದರು.

ದಲಿತ ಮುಖ್ಯಮಂತ್ರಿ ಕೂಗು ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಇದೆಲ್ಲಾ ವಿರೋಧ ಪಕ್ಷದವರು ಮಾಡುತ್ತಿರುವ ಕೆಲಸ. ತಮ್ಮ ವಿಚಾರಗಳನ್ನು ಮುಚ್ಚಿಟ್ಟುಕೊಳ್ಳಲು ಸುಮ್ಮನೆ ಆರೋಪ ಮಾಡುತ್ತಿದ್ದಾರೆ. ಕಳೆದ ಹನ್ನೆರಡು ದಿನಗಳಿಂದ ಬಜೆಟ್ ಕುರಿತು ವಿವಿಧ ಇಲಾಖೆಯ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತಿದ್ದಾರೆ. ಮುಖ್ಯ ಮಂತ್ರಿ ಕೂಗು ವಿಚಾರವನ್ನು ವಿರೋಧ ಪಕ್ಷದವರು ಸುಮ್ಮನೆ ಹೊರಗೆ ತರುತ್ತಿದ್ದಾರೆಂದ ಅವರು, ದಲಿತ ಮುಖ್ಯಮಂತ್ರಿಯನ್ನು ಕಾಂಗ್ರೆಸ್ ಪಕ್ಷದವರೇ ಮಾಡಬೇಕು. ಇನ್ಯಾರು ಮಾಡುತ್ತಾರೆ. ಸಂದರ್ಭ ಬಂದಾಗ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದರು.

ಬೈಕ್ ದುರಂತ: ಯುವತಿ ಬಲಿ, ಮತ್ತೊಬ್ಬರಿಗೆ ಗಂಭೀರ ಗಾಯ

ಹೆಲ್ಮೆಟ್ ಧರಿಸದೆ ಬುಲೆಟ್ ಚಾಲನೆ | ಮುಗಿಲು ಮುಟ್ಟಿದ ಆಕ್ರಂದನ

• ಪ್ರಜೋದಯ ವರದಿ

ಹಾಸನ: ಅತಿವೇಗದ ಬುಲೆಟ್ ಚಾಲನೆಯಿಂದ ಯುವತಿಯೊಬ್ಬಳು ಮೃತಪಟ್ಟು , ಮತ್ತೊಬ್ಬ ಯುವತಿ ಗಂಭೀರವಾಗಿ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿರುವ ಘಟನೆ ನಗರ ಹೊರವಲಯದ ಕೈಗಾರಿಕಾ ಪ್ರದೇಶದಲ್ಲಿ ಭಾನುವಾರ ಸಂಜೆ ನಡೆದಿದೆ.

ಸತ್ಯಮಂಗಲದ ಟಿ.ಎಸ್.ಪ್ರಕಾಶ್ ಹಾಗು ಟಿ.ಎನ್.ಹೇಮಲತಾ ಅವರ ಪುತ್ರಿ ಟಿ.ಪಿ. ಪ್ರಿಯಾ (22) ಮೃತ ದುರ್ದೈವಿ. ಆಕೆಯ ಸ್ನೇಹಿತೆ, ಚನ್ನರಾಯಪಟ್ಟಣ ಮೂಲದ ಸ್ವಾತಿ (23) ಎಂಬುವವರಿಗೂ ಗಂಭೀರ ಗಾಯಗಳಾಗಿದ್ದು, ಬೆಂಗಳೂರಿನ ನಿಮ್ಹಾನ್ಸ್‌ಗೆ ದಾಖಲಿಸಲಾಗಿದೆ.

ನಗರದ ಖಾಸಗಿ ಕಾಲೇಜಿನಲ್ಲಿ ಇಬ್ಬರೂ ಎಂಸಿಎ ಅಂತಿಮ ಸೆಮಿಸ್ಟರ್ ಪರೀಕ್ಷೆಗೆ ತಯಾರಿ ಮಾಡಿಕೊಳ್ಳುತ್ತಿದ್ದರು. ಪ್ರಿಯಾ ಇಂಟರ್‌ನ್‌ಶಿಪ್ ಕೆಲಸಕ್ಕೆ ಹುಡುಕಾಟದಲ್ಲಿದ್ದಳು. ಆದರೆ, ಜವರಾಯನ ಅಟ್ಟಹಾಸಕ್ಕೆ ಪರಿಸ್ಥಿತಿ ಏರುಪೇರಾಗಿದೆ. ಪ್ರಿಯಾ ಅವರ ತಂದೆ ಪ್ರಕಾಶ್ ಬಿಎಸ್‌ಎಫ್ ಯೋಧರಾಗಿದ್ದು, ಜೋಧ್‌ಪುರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸತ್ಯಮಂಗಲದ ನಿವಾಸದಲ್ಲಿ ತಾಯಿ, ಸಹೋದರಿ ಜೊತೆಗೆ ಪ್ರಿಯಾ ವಾಸವಿದ್ದಳು. ಭಾನುವಾರ ಸಂಜೆ ಸ್ನೇಹಿತೆ ಸ್ವಾತಿ ಜೊತೆಗೆ ಸಮಾರಂಭವೊಂದಕ್ಕೆ ಹನುಮಂತಪುರಕ್ಕೆ ಹೋಗುವುದಾಗಿ ತೆರಳಿದ್ದಳು. ಮನೆಯಿಂದ ತನ್ನ ಸ್ಕೂಟಿಯಲ್ಲಿ ಬಂದಿದ್ದ ಪ್ರಿಯಾ ಬಿ. ಕಾಟೀಹಳ್ಳಿಯ ಪರಿಚಯದವರ ಮನೆ ಮುಂದೆ ನಿಲ್ಲಿಸಿ ಬುಲೆಟ್ ಏರಿದ್ದಳು. ಸ್ವಾತಿ ಬುಲೆಟ್ ಓಡಿಸುತ್ತಿದ್ದರೆ ಪ್ರಿಯಾ ಹಿಂದೆ ಕುಳಿತಿದ್ದಳು. ಕೆಐಡಿಬಿ ವೃತ್ತದಿಂದ ಹನುಮಂತಪುರ ರಸ್ತೆಯಲ್ಲಿ ಹೋಗುತ್ತಿದ್ದಾಗ ಜೋರಾಗಿ ಓಡಿಸಿದ್ದರಿಂದ ರಸ್ತೆಗೆ ಹಾಕಿದ್ದ ಹಂಪ್ಸ್ ಬಳಿ ನಿಯಂತ್ರಣಕ್ಕೆ ಸಿಗದೆ ಕೆಳಗೆ ಬಿದ್ದಿದ್ದಾರೆ. ಇಬ್ಬರೂ ಹೆಲ್ಮೆಟ್ ಧರಿಸದೆ ಇದ್ದಿದ್ದರಿಂದ ತಲೆಗೆ ಬಲವಾದ ಪೆಟ್ಟು ಬಿದ್ದ ಹಿನ್ನಲೆಯಲ್ಲಿ ಪ್ರಿಯಾ ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಸ್ವಾತಿಯನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಪ್ರಥಮ ಚಿಕಿತ್ಸೆ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದೊಯ್ಯಲಾಯಿತು. ಹಿಮ್ಸ್‌ನ ಶವಾಗಾರಕ್ಕೆ ಆಗಮಿಸಿದ ಪ್ರಿಯಾ ತಾತ ಚಂದ್ರ, ಸಂಬಂಧಿಕರಾದ ದೊರೆಸ್ವಾಮಿ ಹಾಗು ಕಾಂತರಾಜು ಅವರ ಆಕ್ರಂದನ ಮುಗಿಲು ಮುಟ್ಟಿತ್ತು.

ಅವೈಜ್ಞಾನಿಕ ಹಂಪ್ಸ್‌ನಿಂದ ಅನಾಹುತ

ರಸ್ತೆಯಲ್ಲಿ ಮಹಾನಗರ ಪಾಲಿಕೆಯಿಂದ ಇತ್ತೀಚೆಗೆ ಹಂಪ್ಸ್ ಅಳವಡಿಸಿದ್ದು, ಅವೈಜ್ಞಾನಿಕ ಕಾಮಗಾರಿಯೇ ಅಪಾಯಕ್ಕೆ ಕಾರಣವೆಂದು ಮೃತ ಪ್ರಿಯಾ ಕುಟುಂಬಸ್ಥರು ಆರೋಪಿಸಿದ್ದಾರೆ. ಹಂಪ್ಸ್ ಹಾಕಿದಾಗಿನಿಂದಲೂ ಹಲವಾರು ಅಪಘಾತಗಳು ಸಂಭವಿಸಿ ಮೂರ್ನಾಲ್ಕು ಜನರು ಮೃತಪಟ್ಟಿದ್ದಾರೆ. ಈ ಬಗ್ಗೆ ಮಹಾನಗರ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಹಂಪ್ಸ್ ಹಾಕಿದರೂ ಸೂಚನಾ ಫಲಕ ಹಾಕಿಲ್ಲ, ಹಂಪ್ಸ್‌ಗಳ ಮೇಲೆ ಬಿಳಿ ಬಣ್ಣದ ಪಟ್ಟಿ ಸಹ ಇಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ಅಮಾಯಕ ಯುವತಿ ಸಾವನ್ನಪ್ಪಿದ್ದಾಳೆಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಖಾಸಗಿ ಆಸ್ಪತ್ರೆ ವೈದ್ಯನಿಗೆ ಏಟು

ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಸ್ವಾತಿಯನ್ನು ನಗರದ ಖಾಸಗಿ ಆಸ್ಪತ್ರೆಗೆ ಕರೆತರಲಾಯಿತು. ತಲೆಗೆ ಬಲವಾದ ಏಟು ಬಿದ್ದಿದ್ದರಿಂದ ಇಲ್ಲಿ ಸೂಕ್ತ ಚಿಕಿತ್ಸೆ ದೊರೆಯುವುದು ಅನುಮಾನವೆಂದು ಆಕೆಯ ಪೋಷಕರು ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇವೆ ಎಂದಾಗ ವೈದ್ಯರು ಸಹಕರಿಸದ ಹಿನ್ನಲೆಯಲ್ಲಿ ಆಕ್ರೋಶಗೊಂಡ ಸ್ವಾತಿ ಸಂಬಂಧಿಕರು ವೈದ್ಯನೊಬ್ಬನಿಗೆ ಏಟು ನೀಡಿದರು.

ಗೆಳತಿಯರ ಕಣ್ಣೀರ ವಿದಾಯ

ಸ್ವಾತಿ 3 ತಿಂಗಳ ಹಿಂದೆಯಷ್ಟೇ ವಿವಾಹವಾಗಿದ್ದರೆ, ಪ್ರಿಯಾ ಸೆಮಿಸ್ಟರ್ ಪರೀಕ್ಷೆ ಬಳಿಕ ಕೆಲಸದ ಹುಡುಕಾಟದ ತಯಾರಿಯಲ್ಲಿದ್ದಳು. ಖಾಸಗಿ ಕಾಲೇಜಿನಲ್ಲಿ ಒಟ್ಟಿಗೆ ಓದುತ್ತಿದ್ದ ಗೆಳತಿಯರಿಗೆ ಈ ಗತಿ ಬಂದಿತಲ್ಲ ಎಂದು ಸ್ನೇಹಿತೆಯರು ಮಮ್ಮಲ ಮರುಗಿದರು. ಹಿಮ್ಸ್ ಆವರಣದಲ್ಲಿ ಸೋಮವಾರ ಬೆಳಿಗ್ಗೆ ಜಮಾಯಿಸಿದ ಅವರು ಪ್ರಿಯಾಳ ಅಂತಿಮ ದರ್ಶನಕ್ಕಾಗಿ ಕಾದು ಕುಳಿತಿದ್ದರು. ಗ್ರಾಮಾಂತರ ಠಾಣೆಯ ಅಪಘಾತ ಪ್ರಕರಣ ದಾಖಲಾಗಿದೆ.

ಮೂಲ ಸ್ವರೂಪ ಬದಲಿಸಿ ಹೊಸ ಜಿಲ್ಲಾಡಳಿತ ಭವನ

ಅಧಿಕಾರಿಗಳಿಗೆ ಸಚಿವ ಕೃಷ್ಣಬೈರೇಗೌಡ ತರಾಟೆ | ತಾಂತ್ರಿಕ ತಂಡದಿಂದ ಪರಿಶೀಲನೆಗೆ ಸೂಚನೆ

■ 10 ಕೋ.ರೂ.ನಿಂದ 55 ಕೋ.ರೂ.ಗೆ ಏರಿದ ಕಟ್ಟಡ ನಿರ್ಮಾಣ ವೆಚ್ಚ

• ಪ್ರಜೋದಯ ವರದಿ

ಹಾಸನ: ನಗರದಲ್ಲಿ ಜಿಲ್ಲಾಧಿಕಾರಿ ಕಾರ್ಯಾಲಯದ ಹಿಂಭಾಗ ನಿರ್ಮಾಣಗೊಳ್ಳುತ್ತಿರುವ ಜಿಲ್ಲಾಡಳಿತ ಭವನದ ಕಾಮಗಾರಿಯ ಗಾತ್ರವು 10 ಕೋ.ರೂ.ನಿಂದ 55 ಕೋ.ರೂ.ಗೆ ಹೆಚ್ಚಳ ಆಗುತ್ತಿರುವ ಕುರಿತು ಸರ್ಕಾರದ ಒಪ್ಪಿಗೆ ಪಡೆದುಕೊಳ್ಳದ ಅಧಿಕಾರಿಗಳ ನಿಲುವಿನ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಸೋಮವಾರ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾಡಳಿತ ಭವನ ನಿರ್ಮಾಣ ಕಾಮಗಾರಿ ಸಂಬಂಧದ ಸಭೆಯಲ್ಲಿ ಮಾತನಾಡಿದ ಅವರು, ಭವನದ ಮೂಲ ವಿನ್ಯಾಸ ಹಾಗು ತಗುಲುತ್ತಿರುವ ಹೆಚ್ಚುವರಿ ವೆಚ್ಚದ ಪ್ರಸ್ತಾವನೆಯನ್ನು ಸರ್ಕಾರದ ಮುಂದೆ ಸಲ್ಲಿಸಿ ಸಚಿವ ಸಂಪುಟದ ಒಪ್ಪಿಗೆ ಪಡೆದುಕೊಳ್ಳದ ವಿಚಾರವಾಗಿ ಸಂಬಂಧ ಪಟ್ಟ ಅಧಿಕಾರಿಗಳನ್ನು ಅವರು ತರಾಟೆಗೆ ತೆಗೆದುಕೊಂಡರೆನ್ನಲಾಗಿದೆ.

"ಸರ್ಕಾರದ ಮೂಲ ಆದೇಶ ಪಾಲನೆ ಮಾಡದೆ ಜಿಲ್ಲಾಧಿಕಾರಿ ನೂತನ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಬಾಕಿ ಇರುವ ಅನುದಾನ ಬಿಡುಗಡೆಗೆ ಮುಂದಿನ ವಾರ ತಾಂತ್ರಿಕ ತಂಡದ ಜೊತೆ ಮತ್ತೊಮ್ಮೆ ಪರಿಶೀಲನೆ ನಡೆಸಿ, ವರದಿ ನೀಡಿದ ಬಳಿಕ ಅನುದಾನ ಬಿಡುಗಡೆಗೆ ಕ್ರಮ ವಹಿಸಲಾಗುವುದು.

-ಕೃಷ್ಣಬೈರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ

ರಾಮ ಮಂದಿರದ ವಿನ್ಯಾಸ

ಹೊಸ ಜಿಲ್ಲಾ ಆಡಳಿತ ಭವನ ಅಯೋಧ್ಯೆಯಲ್ಲಿ ನಾಗರ ಶೈಲಿಯಲ್ಲಿ ನಿರ್ಮಾಣಗೊಂಡಿರುವ ರಾಮಮಂದಿರದ ವಿನ್ಯಾಸವನ್ನು ಹೋಲಲಿದೆ. ಹೊಸ ಕಟ್ಟಡ ನಿರ್ಮಾಣಗೊಂಡ ಬಳಿಕ ಜಿಲ್ಲಾಧಿಕಾರಿ ಕಚೇರಿಯೊಂದಿಗೆ ಸಹಾಯಕ ಆಯುಕ್ತರ ಕಚೇರಿ, ಹಳೆಯ ನ್ಯಾಯಾಲಯ ಸಂಕೀರ್ಣ, ಹಳೆಯ ಖಜಾನೆ ಇಲಾಖೆ ಕಚೇರಿ ಮತ್ತಿತರ ಕಚೇರಿಗಳಿದ್ದ ಪ್ರದೇಶವನ್ನು ವಾಹನಗಳ ಪಾರ್ಕಿಂಗ್ ಮತ್ತಿತರ ಉಪಯೋಗಕ್ಕೆ ಬಳಕೆ ಮಾಡಿಕೊಳ್ಳುವ ಉದ್ದೇಶ ಹೊಂದಲಾಗಿದ್ದು, ಹೊಸ ಕಟ್ಟಡದ ಒಟ್ಟು ನಿರ್ಮಾಣ ವಿಸ್ತೀರ್ಣ 18,164.21 ಚದರ ಮೀಟರ್ ಆಗಿರಲಿದೆ.

ಜಿಲ್ಲಾಧಿಕಾರಿ ಕಚೇರಿ ನಿರ್ಮಾಣಕ್ಕೆ ಸರ್ಕಾರ ಆದೇಶ ಇರುವುದು 10 ಕೋ.ರೂ. ಗೆ ಮಾತ್ರ. ಆದರೆ, ಕಟ್ಟಡದ ವೆಚ್ಚ ಈಗ 55 ಕೋ.ರೂ.ಗೆ ಏರಿದೆ. ಜಿ+1ಗೆ ಮಾತ್ರ ಸರ್ಕಾರದ ಅನುಮತಿ ನೀಡಲಾಗಿದೆ. ಆದರೆ, ಕಟ್ಟಡವನ್ನು ಕ್ಯಾಬಿನೆಟ್ ಒಪ್ಪಿಗೆ ಇಲ್ಲದೆ ಜಿ+3ಗೆ ಏರಿಸಲಾಗಿದೆ. ಈ ಬಗ್ಗೆ ಏಕೆ ಸರ್ಕಾರದ ಗಮನಕ್ಕೆ ತಂದಿಲ್ಲ, ಮೂಲ ಆದೇಶದಲ್ಲಿ

» ನಾಲ್ಕನೇ ಪುಟದಲ್ಲಿ

ಅರೇಹಳ್ಳಿ ಹಳ್ಳಿಸಂತೆ ಮಾರುಕಟ್ಟೆ ಪ್ರಾರಂಭ

• ಪ್ರಜೋದಯ ವರದಿ

ಅರೇಹಳ್ಳಿ: ಕಳೆದ ಎರಡು ವರ್ಷಗಳಿಂದ ಹಳ್ಳಿಸಂತೆ ಮಾರುಕಟ್ಟೆ ನಿರ್ಮಾಣಕ್ಕೆ ಎದುರಾಗಿದ್ದ ತಕರಾರುಗಳು ನಿವಾರಣೆಗೊಂಡು ಮಾರುಕಟ್ಟೆ ಉದ್ಘಾಟನೆಗೊಂಡಿರುವುದು ಸಂತೋಷದ ಸಂಗತಿ ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

(ನಾಲ್ಕನೇ ಪುಟದಲ್ಲಿ)

ಒಳ ಮೀಸಲಾತಿ ಗೊಂದಲ ಸರಿಪಡಿಸಲು ಆಗ್ರಹ

ಛಲವಾದಿ ಮಹಾ ಮಂಡಲದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ

• ಪ್ರಜೋದಯ ವರದಿ

ಹಾಸನ: ಒಳ ಮೀಸಲಾತಿ ಬಗ್ಗೆ ಇರುವ ಗೊಂದಲ, ಸಮಸ್ಯೆ ಹಾಗು ನ್ಯಾಯಾಲಯದ ಅಡೆತಡೆ ನಿವಾರಣೆ ಆಗುವವರೆಗೂ ಹಳೆಯ ಮೀಸಲಾತಿ ಅನ್ವಯ ನೇಮಕಾತಿ ಮತ್ತು ಶಿಕ್ಷಣಕ್ಕೆ ತೊಂದರೆಯಾಗದಂತೆ ತಕ್ಷಣ ಸೂಕ್ತ ಆದೇಶ ಹೊರಡಿಸಬೇಕೆಂದು ಒತ್ತಾಯಿಸಿ ಛಲವಾದಿ ಮಹಾ ಮಂಡಲ ವತಿಯಿಂದ ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಯಿತು.

ಸಂಘಟನೆ ರಾಜ್ಯಾಧ್ಯಕ್ಷ ಪುಟ್ಟರಾಜಪ್ಪ ಅವರು ಮಾತನಾಡಿ, ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ಪ್ರವರ್ಗ ಎ.ಬಿ.ಸಿ ಎಂದು ವರ್ಗೀಕರಿಸಿ ಪ್ರಮಾಣ ಪತ್ರ ವಿತರಿಸಲು ಹೊರಡಿಸಿರುವ ಆದೇಶದಿಂದ ವಿದ್ಯಾರ್ಥಿಗಳು ಹಾಗೂ ಉದ್ಯೋಗಾಕಾಂಕ್ಷಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಕಳೆದ 2 ವರ್ಷಗಳಿಂದ ಒಳಮೀಸಲಾತಿ ಜಾರಿ

» ನಾಲ್ಕನೇ ಪುಟದಲ್ಲಿ

ದಿಶಾ ಸಭೆ ಮುಂದೂಡಿಕೆ

• ಪ್ರಜೋದಯ ವರದಿ

ಹಾಸನ : ಸಂಸದ ಶ್ರೇಯಸ್ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನೆ (ದಿಶಾ) ಸಭೆಯನ್ನು ಫೆ.24 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಂಭಾಗಣದಲ್ಲಿ ಏರ್ಪಡಿಸಲಾಗಿದ್ದ ಸಭೆಯನ್ನು ಕಾರಣಾಂತರದಿಂದ ಸಭೆಯನ್ನು ಮುಂದೂಡಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ತಿಳಿಸಿದ್ದಾರೆ.

ಫೆ. 25 ರಂದು ಕೆ.ಡಿ.ಪಿ ಸಭೆ

• ಪ್ರಜೋದಯ ವರದಿ

ಹಾಸನ : ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆ.ಡಿ.ಪಿ) ಪ್ರಗತಿ ಪರಿಶೀಲನೆ ಸಭೆಯನ್ನು ಫೆ. 25 ರಂದು ಬೆಳಿಗ್ಗೆ 10.30 ಕ್ಕೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಅವರು ತಿಳಿಸಿದ್ದಾರೆ.

ತಿಂಗಳಿನಿಂದ ಶಾಲೆ ಬಿಟ್ಟ ನೆಹರೂ ನಗರದ 16 ಮಕ್ಕಳು | ಕ್ರಷರ್ ಸ್ಥಗಿತಗೊಂಡರಷ್ಟೇ ಶಾಲೆಗೆ ಹೋಗುವುದಾಗಿ ಪಟ್ಟು

ಮಕ್ಕಳನ್ನು ಶಾಲೆಗೆ ಕಳುಹಿಸಲು ಒಪ್ಪದ ಪೋಷಕರು

ರವಿಕುಮಾರ್ ದುಮ್ಮಿ

• ಪ್ರಜೋದಯ ವರದಿ

ಅರಕಲಗೂಡು: ತಾಲ್ಲೂಕಿನ ನೆಹರುನಗರ ಸಮೀಪದ ಖಾಸಗಿ ಕಲ್ಲು ಗಣಿಗಾರಿಕೆಯಿಂದ ಮಕ್ಕಳ ವಿದ್ಯಾಭ್ಯಾಸ ಹಾಗು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಕ್ರಷರ್ ಸ್ಥಳಾಂತರ ಮಾಡುವ ತನಕ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲವೆಂದು ಪೋಷಕರು ಪಟ್ಟು ಹಿಡಿದಿದ್ದಾರೆ.

ಈ ಪರಿಣಾಮ ಕಳೆದ ಒಂದು ತಿಂಗಳಿನಿಂದ 16 ಮಕ್ಕಳು ಶಾಲೆಗೆ ಗೈರಾಗಿ ಶಿಕ್ಷಣದಿಂದ ವಂಚಿತರಾಗಿದ್ದಾರೆ. ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿ ನೆಹರೂನಗರ ಗ್ರಾಮದಲ್ಲಿ 50ಕ್ಕೂ ಹೆಚ್ಚು ದಲಿತ ಕುಟುಂಬಗಳು ವಾಸವಿದ್ದು, ಎಲ್ಲರೂ ಹೇಮಾವತಿ ಮುಳುಗಡೆ ಪ್ರದೇಶದಿಂದ ಬಂದವರೇ ಆಗಿದ್ದಾರೆ. ಸರ್ಕಾರದ ಪುನರ್ವಸತಿ ಗ್ರಾಮ ಇದಾಗಿದೆ. ಕೊಣನೂರು-ಮಲ್ಲಿಪಟ್ಟಣ ರಾಜ್ಯ ಹೆದ್ದಾರಿಯಲ್ಲಿ ಬರುವ ಗ್ರಾಮವಾಗಿದೆ. ಇಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕಾರ್ಯನಿರ್ವಹಿಸುತ್ತಿದ್ದು, 1 ರಿಂದ 5ನೇ ತರಗತಿವರೆಗೆ 16 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ.

ಈ ಸಾಲಿನ ಶೈಕ್ಷಣಿಕ ಅವಧಿ ಮುಗಿಯುವ ಹಂತಕ್ಕೆ ಬಂದಿದ್ದು, ಮಕ್ಕಳು ಮಾತ್ರ ಒಂದು ತಿಂಗಳಿನಿಂದ ಶಾಲೆಯನ್ನು ತೊರೆದು ಶಿಕ್ಷಣ ಸೇರಿ ಶಾಲೆಯಲ್ಲಿ ಸಿಗುವ ಇತರೆ ಮೂಲ ಸೌಕರ್ಯಗಳಿಂದಲೂ ವಂಚಿತರಾಗಿದ್ದಾರೆ. ಕ್ರಷರ್ ಮತ್ತು ಪೋಷಕರ ನಡುವೆ ಉಂಟಾಗಿರುವ ಶೀತಲ ಸಮರ ಮಕ್ಕಳ ಕಲಿಕೆ ಮೇಲೆ ಪರಿಣಾಮ ಬೀರುತ್ತಿದೆ. ಈ ಸಮಸ್ಯೆ ನಿವಾರಣೆ, ಪರಿಹಾರಕ್ಕೆ ನೆಹರುನಗರ ವಿದ್ಯಾವಂತ ಯುವಕರು, ಸಂಘಟನೆಗಳಲ್ಲಿ ತೊಡಗಿರುವವರಿಗೆ ಅಷ್ಟೇನೂ ಕಷ್ಟ ಸಾಧ್ಯವಿಲ್ಲ. ಮೊದಲು ಮಕ್ಕಳ ಶಿಕ್ಷಣ ದೃಷ್ಟಿಯಿಂದ ನಿರ್ಧಾರಕ್ಕೆ ಬರುವ ಬದಲು ಯಾವುದೋ ಕಾರಣಕ್ಕೆ ಒಳಗಾಗಿ ಮಕ್ಕಳ ಭವಿಷ್ಯದ ಮೇಲೆ ಚೆಲ್ಲಾಟವಾಡುತ್ತಿದ್ದಾರೆ.

ಪೋಷಕರಿಂದ ಪತ್ರ

ನೆಹರುನಗರ ಗ್ರಾಮದಿಂದ 200 ಮೀಟರ್ ಅಂತರದಲ್ಲಿ ಕಾರ್ಯಾರಂಭ ಮಾಡುತ್ತಿರುವ ಖಾಸಗಿ ಕ್ರಷರ್‌ನಿಂದ ಮಕ್ಕಳಿಗೆ ತೊಂದರೆಯಾಗುತ್ತಿದೆಯಲ್ಲದೆ ಗ್ರಾಮಸ್ಥರು ಕೂಡ ನೆಮ್ಮದಿಯಿಂದ ಜೀವನ ಮಾಡಲು ಆಗುತ್ತಿಲ್ಲ. ಅಂತಿಮವಾಗಿ ಕ್ರಷರ್ ಸ್ಥಳಾಂತರ ಮಾಡುವ ತನಕ ಮಕ್ಕಳನ್ನು ನಾವು ಶಾಲೆಗೆ ಕಳುಹಿಸುವುದಿಲ್ಲವೆಂಬ ಮನವಿ ಪತ್ರವನ್ನು ಪೋಷಕರು ಪ್ರತ್ಯೇಕವಾಗಿ ಮುಖ್ಯಶಿಕ್ಷಕರಿಗೆ ಬರೆದುಕೊಟ್ಟಿದ್ದಾರೆ.

ಶಿಕ್ಷಕರಿಂದ ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ, ಸಭೆ

ಶಾಲೆಗೆ ಮಕ್ಕಳನ್ನು ಕಳುಹಿಸುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು, ಶಾಲಾ ಶಿಕ್ಷಕರು ಅನೇಕ ಬಾರಿ ಗ್ರಾಮಕ್ಕೆ ತೆರಳಿ ಮಕ್ಕಳ ಮನೆಗೆ ಭೇಟಿ ಮಾಡಿ ವಿನಂತಿ ಮಾಡುತ್ತಿದ್ದರೂ ಪ್ರಯೋಜನವಾಗುತ್ತಿಲ್ಲ. ಅಲ್ಲದೆ ನಿಮ್ಮ ಗ್ರಾಮದ ಮನೆ, ದೇವಸ್ಥಾನದಲ್ಲಿ ಮಕ್ಕಳಿಗೆ ಪಾಠ ಮಾಡುವುದಾಗಿ ಶಿಕ್ಷಕರು ಬೇಡಿಕೊಂಡರೂ ಪೋಷಕರಿಂದ ಸ್ಪಂದನೆ ದೊರೆಯುತ್ತಿಲ್ಲ. ಬೆಳಿಗ್ಗೆ 9.30ಕ್ಕೆ ಶಾಲೆಗೆ ಬರುವ ಇಬ್ಬರು ಶಿಕ್ಷಕರು ಮಕ್ಕಳಿಲ್ಲದೆ ಶಾಲಾ ಕೊಠಡಿಯಲ್ಲಿ ಕುಳಿತು ಸಂಜೆ 4.30ಕ್ಕೆ ವಾಪಾಸ್ಸಾಗುತ್ತಾರೆ. ಬಳಿಕ ಮನೆಗೆ ಬರುವ ಬದಲು ಇಲಾಖೆಯ ಹಿರಿಯ ಅಧಿಕಾರಿಗಳ ನಿರ್ದೇಶನದ ಮೇರೆಗೆ ಸಂಜೆ 7ರಿಂದ ಗ್ರಾಮದಲ್ಲಿ ಪೋಷಕರು, ವಿದ್ಯಾರ್ಥಿಗಳ ಸಭೆ ನಡೆಸಿ ಶಾಲೆಗೆ ಮಕ್ಕಳನ್ನು ಕಳುಹಿಸಿ, ಇಲ್ಲವಾದರೇ ನೀವು ಎಲ್ಲಿ ಸೂಚಿಸುತ್ತೀರಾ ಅಲ್ಲಿಯೇ ಮಕ್ಕಳಿಗೆ ಪಾಠ ಮಾಡುತ್ತೇವೆಂದು ಮನವೊಲಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ.

ತಾಲ್ಲೂಕಿನ ಅರಸೀಕಟ್ಟೆ ಕಾವಲ್ ಸರ್ವೆ ನಂಬರ್ 116ರಲ್ಲಿ ಈ ಹಿಂದೆಯೇ ಖಾಸಗಿ ಒಡೆತನದಲ್ಲಿ ಕ್ರಷರ್ ಕಾರ್ಯನಿರ್ವಹಿಸುತ್ತಿದೆ. ಅದರೊಂದಿಗೆ ಮುದಗನೂರು ಕಾವಲ್ ನಲ್ಲಿಯೂ ಮತ್ತೊಂದು ಕ್ರಷರ್ ನಡೆಯುತ್ತಿದೆ. ಈ ಭಾಗದಲ್ಲಿನ ಸರ್ಕಾರಿ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಂಡೆಗಳು ಇರುವ ಕಾರಣ ಮತ್ತೊಂದು ಕ್ರಷರ್‌ಗೆ ಅನುಮತಿ ನೀಡಲಾಗಿದೆ. ಈ ಭಾಗದಲ್ಲಿಯೂ ಕೂಡ ಸರ್ಕಾರಿ ಶಾಲೆ, ಜನವಸತಿ ಪ್ರದೇಶ ಇದ್ದು, ಇದುವರೆಗೂ ಯಾವುದೇ ಆಕ್ಷೇಪಣೆ ಹಳೆಯ ಎರಡು ಕ್ರಷರ್‌ಗಳಿಗೆ ಬಂದಿಲ್ಲ. ಈ ಇಬ್ಬರು ಮಾಲೀಕರು ಪ್ರಭಾವಿಗಳಾಗಿರುವ ಕಾರಣ ಅವರ ಕಲ್ಲುಗಣಿಗಾರಿಕೆಯಿಂದ ಸಾಕಷ್ಟು ತೊಂದರೆಗಳು ಎದುರಾಗುತ್ತಿದ್ದರೂ ಕೂಡ ಜನರು ಇವರ ವಿರುದ್ಧ ಧ್ವನಿ ಎತ್ತಲು ಸಾಧ್ಯವಾಗಿಲ್ಲ.

"ಈಗಾಗಲೇ ಶಾಸಕರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ವಿದ್ಯಾರ್ಥಿಗಳ ಪೋಷಕರು, ಗ್ರಾಮಸ್ಥರು, ರೈತ ಸಂಘ, ವಿವಿಧ ಸಂಘಟನೆಗಳ ಸಮ್ಮುಖದಲ್ಲಿ ಸಭೆ ನಡೆಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಮಾಡುವುದು ಬೇಡ. ಮೊದಲು ಮಕ್ಕಳನ್ನು ಶಾಲೆಗೆ ಕಳುಹಿಸಿ, ಕ್ರಷರ್‌ಗೆ ಸಂಬಂಧಿಸಿ ಜಿಲ್ಲಾಧಿಕಾರಿ ಕ್ರಮವಹಿಸುತ್ತಾರೆಂದು ಹೇಳಲಾಗಿದೆ. ಮಕ್ಕಳು ಶಾಲೆಗೆ ಬರುವ ವಿಶ್ವಾಸವಿದೆ.

-ಕೆ.ಸಿ.ಸೌಮ್ಯ, ತಹಶೀಲ್ದಾರ್

"ಶಾಲೆಗೆ ಮಕ್ಕಳನ್ನು ಕಳುಹಿಸುವಂತೆ ಅನೇಕ ಬಾರಿ ನೆಹರುನಗರ ಪೋಷಕರಲ್ಲಿ ಮನವಿ ಮಾಡಲಾಗಿದೆ. ಯಾವುದೇ ಸ್ಪಂದನೆ ದೊರೆಯುತ್ತಿಲ್ಲ. ಶಾಲೆಗೆ ಮಕ್ಕಳು ಗೈರಾಗುತ್ತಿರುವ ಬಗ್ಗೆ ತಾಲ್ಲೂಕು ಆಡಳಿತ ಸೇರಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಲಿಖಿತ ಮನವಿ ಸಲ್ಲಿಸಲಾಗಿದೆ. ಹಿರಿಯ ಅಧಿಕಾರಿಗಳ ಮಾರ್ಗದರ್ಶನದ ಮೇರೆಗೆ ಮುಂದಿನ ಕ್ರಮ ವಹಿಸಲಾಗುವುದು.

-ಕೆ.ಪಿ.ನಾರಾಯಣ, ಕ್ಷೇತ್ರ ಶಿಕ್ಷಣಾಧಿಕಾರಿ

ಕ್ರಿಕೆಟ್ ಪಂದ್ಯಾವಳಿ ವೇಳೆ ಗಲಾಟೆ: ವ್ಯಕ್ತಿಗೆ ಚಾಕು ಇರಿತ

• ಪ್ರಜೋದಯ ವರದಿ

ಸಕಲೇಶಪುರ: ಕ್ರಿಕೆಟ್ ಆಟದ ಬಳಿಕ ಸಂಭ್ರಮಾಚರಣೆಯಲ್ಲಿ ತೊಡಗಿದ್ದ ವೇಳೆ ವ್ಯಕ್ತಿಯೊಬ್ಬ ಜಗಳ ಮಾಡಿ ಯುವಕನಿಗೆ ಚಾಕುವಿನಿಂದ ಇರಿದಿರುವ ಘಟನೆ ತಾಲ್ಲೂಕಿನ ಬಾಗೆ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದಿದೆ.

ಗ್ರಾಮದ ಅಶೋಕ ಎಂಬಾತನಿಗೆ ಕ್ರಿಕೆಟ್ ಆಯೋಜಕ ಮಣಿಕಂಠ ಎಂಬಾತ ಚಾಕುವಿನಿಂದ ಇರಿದು ಗಂಭೀರ ಗಾಯಗೊಳಿಸಿದ್ದಾನೆ. ಗಾಯಾಳು ಹಾಸನದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿರುವ ಅಶೋಕ ಊರಿನಲ್ಲಿ ಕ್ರಿಕೆಟ್ ಆಯೋಜನೆಗೊಂಡಿದ್ದ ಹಿನ್ನಲೆಯಲ್ಲಿ ಬಂದಿದ್ದ. ಪಂದ್ಯ ಗೆದ್ದ ಬಳಿಕ ಯುವಕರು ಸಂಭ್ರಮದಲ್ಲಿದ್ದಾಗ ಮಣಿಕಂಠ ಜಗಳ ಮಾಡಿಕೊಂಡಿದ್ದಾನೆ. ಸಾರ್ವಜನಿಕರು ಮಧ್ಯ ಪ್ರವೇಶಿಸಿ ಜಗಳ ಬಿಡಿಸಿದ್ದರು. ಕೆಲವು ಸಮಯದ ಬಳಿಕ ಮತ್ತೆ ಅಲ್ಲಿಗೆ ಬಂದ ಮಣಿಕಂಠ ಏಕಾಏಕಿ ಚಾಕುವಿನಿಂದ ಇರಿದಿದ್ದಾನೆ. ಆಗ ಆತನನ್ನು ಹಿಡಿದ ಜನರು ಹಿಗ್ಗಾಮುಗ್ಗಾ ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ನಡೆದಿದೆ.

ಎಐ ಯುಗ: ಅವಕಾಶಗಳು, ಸವಾಲುಗಳು ಮತ್ತು ಭಾರತದ ಪಾತ್ರ

ಚರ್ಮ ಕುಟೀರದ ಶ್ರಮಿಕ ಬೂಟ್ ಪಾಲಿಷ್ ಮಾಡುತ್ತ ಕೇಳಿದ- ಎಐನಿಂದ ನನ್ನ ಮಗನ ಕೆಲಸಕ್ಕೇನಾದರೂ ತೊಂದರೆಯಾಗತ್ತಾ ಸರ್?. ಸುಕ್ಕುಗಟ್ಟಿದ ಮುಖದಲ್ಲಿ ಆತಂಕದ ಗೆರೆಗಳಿದ್ದವು. ಅವನ ಮಗ ಕಂಪನಿಯೊಂದರಲ್ಲಿ ಸಾ-ವೇರ್ ಎಂಜಿನಿಯರ್. ಆ ಶ್ರಮಿಕನಿಗೆ ಸಂದರ್ಭಕ್ಕನುಗುಣವಾಗಿ ಸಮಾಧಾನಕರ ಉತ್ತರ ಕೊಟ್ಟು ಹೊರಟೆನಾದರೂ, ಕೃತಕ ಬುದ್ಧಿಮತ್ತೆಯ (ಎಐ) ಮಿಥ್ ಅಥವಾ ಜಿಜ್ಞಾಸೆಯ ಕುರಿತಾಗಿ ಸಾಮಾನ್ಯರಿಗೆ ಅದಷ್ಟು ಸರಳವಾಗಿ ತಿಳಿಸುವ ಪ್ರಯತ್ನ ಮಾಡಬೇಕೆನಿಸಿತು.

ಈಗ ಪ್ರತಿಯೊಂದು ಮೀಡಿಯಾಗಳಲ್ಲೂ ಹಾಗೂ ಸಾರ್ವಜನಿಕ ಸಂಭಾಷಣೆಗಳಲ್ಲೂ ಚರ್ಚೆಯಾಗುತ್ತಿರುವ ಕೇಂದ್ರೀಕೃತ ವಿಷಯವೆಂದರೆ ಕೃತಕ ಬುದ್ಧಿಮತ್ತೆಯೆಂಬ ಪೆಡಂಭೂತ. ಬಹುಜನರ ತಿಳಿವಳಿಕೆಯಲ್ಲಿ ಇದು ದೆವ್ವವಾದರೆ, ತಿಳಿದವರಲ್ಲಿ ಇದು ದೇವತೆ. ಅಂಥ ತಿಳಿದವರಲ್ಲಿ ದಿಗ್ಗಜರೆನಿಸಿದ ಟಾಟಾ ಸನ್ಸ್‌ನ ಅಧ್ಯಕ್ಷರಾದ ನಟರಾಜನ್ ಚಂದ್ರಶೇಖರನ್, ಎಐ ಕುರಿತು ಇತ್ತೀಚೆಗೆ ನಡೆದ ಚರ್ಚೆಯೊಂದರಲ್ಲಿ ಸರಳವಾಗಿ ವಿವರಿಸುತ್ತಾ, ಎಐ ಒಂದು ಮೂಲಭೂತ ನಾಗರಿಕ ಹಾಗೂ ಮೂಲಸೌಕರ್ಯಾತ್ಮಕ ಬುದ್ಧಿಮತ್ತೆಯ ಬದಲಾವಣೆ.



ವಿಜ್ಞಾನದ ಇತಿಹಾಸದಲ್ಲಿ ಸ್ಟೀಮ್ ಎಂಜಿನ್, ವಿದ್ಯುತ್ ಮತ್ತು ಇಂಟರ್‌ನೆಟ್‌ನಂಥ ಮೂಲಸೌಕರ್ಯ ಬದಲಾವಣೆಗಳು ಜಾಗತಿಕ ಅಭಿವೃದ್ಧಿಯನ್ನು ವೇಗಗೊಳಿಸಿದಂತೆ, ಎಐ ಕೂಡ ಅಂಥದೇ ಕ್ರಾಂತಿಯನ್ನು ಸೃಷ್ಟಿಸಲಿದೆ; ಎಐ ಸಹಾಯದಿಂದ ಕಡಿಮೆ ಸಮಯದಲ್ಲಿ ಕಡಿಮೆ ಖರ್ಚಿನಲ್ಲಿ ಅಗಾಧ ಗಾತ್ರದ ಕೆಲಸಗಳನ್ನು ಮಾಡುವುದು ಸಾಧ್ಯವಾಗುತ್ತಿದ್ದು, ಇದು ಉತ್ಪಾದಕತೆಯನ್ನು ಗಣನೀಯವಾಗಿ ಹೆಚ್ಚಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಇನ್ನು ತಾಂತ್ರಿಕವಾಗಿ ಹೇಳಬೇಕೆಂದರೆ ಕೃತಕ ಬುದ್ಧಿಮತ್ತೆಯು ಮಾನವನಂತೆ ಯೋಚಿಸಲು, ಕಲಿಯಲು ಮತ್ತು ತೀರ್ಮಾನ ತೆಗೆದುಕೊಳ್ಳಲು ಯಂತ್ರಗಳಿಗೆ ಸಾಮರ್ಥ್ಯ ನೀಡುವ ತಂತ್ರಜ್ಞಾನ. ಈ ತಂತ್ರಜ್ಞಾನದಲ್ಲಿ ಯಂತ್ರಗಳು ತಮ್ಮಲ್ಲಿರುವ ಮಾಹಿತಿಯಿಂದ ಕಲಿತು, ಅನುಭವದ ಆಧಾರದ ಮೇಲೆ ತಮ್ಮ ಕಾರ್ಯಕ್ಷಮತೆಯನ್ನು ಸುಧಾರಿಸುತ್ತ ಬೆಳೆಯುತ್ತವೆ. ಕೃತಕ ಬುದ್ಧಿಮತ್ತೆಯನ್ನು ಎಲ್ಲಾ ಕ್ಷೇತ್ರಗಳಲ್ಲೂ ವ್ಯಾಪಕವಾಗಿ ಬಳಸಲಾಗುತ್ತಿದೆ.

ಕೃತಕ ಬುದ್ಧಿಮತ್ತೆಯ ಬಗೆಗೆ ಚರ್ಚಿಸುವ ಮೊದಲು ಅದರ ರಚನಾ ಸ್ವರೂಪವನ್ನು ತಿಳಿದುಕೊಳ್ಳಬೇಕು. ಕೇಕ್‌ನಂತೆಯೇ ಪದರಗಳಿಂದ ನಿರ್ಮಿತವಾಗಿರುವ ಸಂಕೀರ್ಣ ವ್ಯವಸ್ಥೆಯಿದು. ಕೆಳಗೆ ತಿಳಿಸಿರುವ ಪದರಗಳು ಒಂದಕ್ಕೊಂದು ಅವಲಂಬಿತವಾಗಿದ್ದು ಪರಿಣಾಮಕಾರಿಯಾಗಿರಲು ಒಟ್ಟಾಗಿ ಕಾರ್ಯನಿರ್ವಹಿಸಬೇಕು:

ಅಡಿಪಾಯ/ಇಂಧನ ಪದರ: ಡೇಟಾ ಕೇಂದ್ರಗಳು ಕಾರ್ಯನಿರ್ವಹಿಸಲು ಅಗತ್ಯವಿರುವ ಅಪಾರ ವಿದ್ಯುತ್ ಮತ್ತು ಶಕ್ತಿಯ ಅವಶ್ಯಕತೆಯನ್ನು ಪ್ರತಿನಿಧಿಸುತ್ತದೆ.

ಗಣನಾ ಮೂಲಸೌಕರ್ಯ: ತರಬೇತಿ ಮತ್ತು ನಿರ್ವಹಣೆಗೆ ಅಗತ್ಯವಾದ ಕಚ್ಚಾ ಗಣನಾ ಶಕ್ತಿಯನ್ನು ಒದಗಿಸುವ ವಿಶೇಷ ಪ್ರೊಸೆಸರ್‌ಗಳು (ಎನ್ವಿಡಿಯಾ ಕಂಪನಿಯ ಜಿಪಿಯು) ಹಾಗೂ ಡೇಟಾವನ್ನು ವೇಗವಾಗಿ ವಿನಿಮಯಗೊಳಿಸಲು ಅಗತ್ಯವಾದ ನೆಟ್‌ವರ್ಕಿಂಗ್ ಉಪಕರಣಗಳಿರುವ ಹಾರ್ಡ್‌ವೇರ್ ಪದರವಿದು.

ಡೇಟಾ ಕೇಂದ್ರಗಳು: ಕಾರ್ಖಾನೆಯೆನ್ನಬಹುದಾದ ಪದರವು ಡೇಟಾವನ್ನು ಸಂಗ್ರಹಿಸುವುದು ಮತ್ತು ಎಐ ಮಾದರಿಗಳಿಗೆ ತರಬೇತಿ ನೀಡುವ ಡೇಟಾ ಕೇಂದ್ರಗಳು ಹಾಗೂ ವರ್ಚುವಲೈಸ್ಡ್ ಕ್ಲೌಡ್ ಪರಿಸರಗಳನ್ನು ಹೊಂದಿರುತ್ತವೆ.

ಎಐ ಮಾದರಿಗಳು: ಜ್ಞಾನಾತ್ಮಕ ಮಿದುಳು ಎನ್ನಲಾಗುವ ಈ ಪದರದಲ್ಲಿ ಮೂಲಭೂತ ಲಾರ್ಜ್ ಲ್ಯಾಂಗ್ವೇಜ್ ಮಾದರಿಗಳು (ಚಾಟ್ ಜಿಪಿಟಿ), ಪರಿಣಾಮಕಾರಿ, ಸುರಕ್ಷಿತ ಮತ್ತು ನಿಖರವಾಗಿಸುವ ತರಬೇತಿ, ಸೂಕ್ಷ್ಮ ಹೊಂದಾಣಿಕೆಯ ಕಾರ್ಯಾಚರಣೆಗಳನ್ನು ನಡೆಸಲಾಗುತ್ತವೆ.

ಅನ್ವಯಿಕೆ/ಬಳಕೆ: ಕೇಕ್‌ನ ಐಸಿಂಗ್ ಎನ್ನಬಹುದಾದ ಉತ್ತುಂಗದ ಪದರವು ಬಳಕೆದಾರರೊಂದಿಗೆ ವ್ಯವಹರಿಸುತ್ತದೆ. ಇದರಲ್ಲಿ ಚಾಟ್‌ಬಾಟ್‌ಗಳು/ವರ್ಚುವಲ್ ಅಸಿಸ್ಟೆಂಟ್‌ಗಳು, ಆರೋಗ್ಯ, ಶಿಕ್ಷಣ, ಕೃಷಿ, ಹಣಕಾಸು ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಸಂಬಂಧಿಸಿದ ಪರಿಹಾರಗಳನ್ನು ಒದಗಿಸುತ್ತವೆ.

ತಂತ್ರಜ್ಞಾನದ ಎಲ್ಲಾ ಐದು ಪದರಗಳ ಮೇಲೂ ಗಮನಹರಿಸುವ ಮೂಲಕ ಭಾರತವು ಉನ್ನತ ಮಟ್ಟದ ಎಐಗೆ ಸಿದ್ಧ ರಾಷ್ಟ್ರವಾಗಿ ತನ್ನ ಸ್ಥಾನವನ್ನು ಸ್ಥಾಪಿಸಿಕೊಳ್ಳುತ್ತಿದೆ.

ಇದರ ಫಲವಾಗಿ, ಎಐ ಸಿದ್ಧತೆಯಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಅಮೆರಿಕ ಮತ್ತು ಚೀನಾದ ನಂತರ ಮೂರನೇ ಸ್ಥಾನವನ್ನು ಪಡೆದಿದೆ. ಭಾರತದಲ್ಲಿ ಎಐ ಕ್ಷೇತ್ರದಲ್ಲಿ ಭಾರಿ ಹೂಡಿಕೆ ಮಾಡುತ್ತಿರುವ ಕಂಪನಿಗಳಲ್ಲಿ ರಿಲಯನ್ಸ್, ಅದಾನಿ, ಟಾಟಾ, ಇನ್ಫೋಸಿಸ್, ವಿಪ್ರೋ, ಎಲ್ ಅಂಡ್ ಟಿ, ಬಾಷ್ ಮತ್ತು ಫ್ರಾಕ್ಟಲ್ ಅನಾಲಿಸಿಸ್ ಪ್ರಮುಖವಾಗಿವೆ.

ಈ ಕಂಪನಿಗಳು ಲಕ್ಷಾಂತರ ಕೋಟಿ ಹೂಡಿಕೆಯಿಂದ ಸ್ವದೇಶಿ ಸಾವರಿನ್ ಎಐ ಮೂಲ ಸೌಕರ್ಯವನ್ನು ನಿರ್ಮಿಸುತ್ತಿವೆ. ಈ ಪ್ರಯತ್ನಗಳಲ್ಲಿ ಡೇಟಾ ಸೆಂಟರ್ ಸಾಮರ್ಥ್ಯ ವಿಸ್ತರಣೆ ಹಾಗೂ ಸ್ಥಳೀಯ ಅಗತ್ಯಗಳಿಗೆ ಹೊಂದುವ ಎಐ ಮಾದರಿಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗುತ್ತಿದೆ. ವಿದೇಶಿ ಕಂಪನಿಗಳ ಮೇಲಿನ ಅವಲಂಬನೆ ಕಡಿಮೆ ಮಾಡುವಲ್ಲಿ ಇವು ಯಶಸ್ವಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಇತ್ತೀಚಿನ ದಿನಗಳಲ್ಲಿ ಐಟಿ ವಿಭಾಗದಲ್ಲಿ ಸುನಾಮಿ ಸೃಷ್ಟಿಸಿರುವುದು ಎಐನ ಮುಂದಿನ ಆವಿಷ್ಕಾರವಾದ ಆರ್ಟಿಫಿಷಿಯಲ್ ಜನರೇಟಿವ್ ಇಂಟೆಲಿಜೆ (ಎಜಿಐ). ಈ ಮುಂದುವರಿದ ತಂತ್ರಜ್ಞಾನವು ಬೃಹತ್ ಪ್ರಮಾಣದ ಡೇಟಾವನ್ನು ವಿಶ್ಲೇಷಿಸಿ ಮಾದರಿಗಳನ್ನು ಗುರುತಿಸಿ, ಮಾನವನ ಸೃಜನಶೀಲತೆಗೆ ಸಮಾನವಾದ ಹೊಸ ವಿಷಯಗಳನ್ನು ಸ್ವತಂತ್ರವಾಗಿ ಉತ್ಪಾದಿಸುತ್ತದೆ.

ಅಮೆರಿಕದ ಆಂಥ್ರೊಪಿಕ್ ಸಂಸ್ಥೆ ಬಿಡುಗಡೆ ಮಾಡಿರುವ ಕ್ಲಾಡ್ ಅಂಥದೊಂದು ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್. ಇದನ್ನೇ ಭಾರತದ ಹೆಚ್ಚಿನ ಐಟಿ ಕಂಪನಿಗಳು ಸಾವಿರಾರು ಎಂಜಿನಿಯರ್‌ಗಳ ಮೂಲಕ ಮಾಡುತ್ತಿರುವುದು.

ಇನ್ನು ಮುಂದೆ ಎಜಿಐ ಮಾಡೆಲ್‌ಗಳು ಕೆಲವೇ ಕುಶಲಕರ್ಮಿಗಳ ಸಹಾಯದಿಂದ ಹೆಚ್ಚು ಉತ್ಪಾದಕತೆಯನ್ನು ನೀಡುತ್ತವೆ. ಸನ್ ಮೈಕ್ರೋಸಿಸ್ಟಮ್‌ನ ಸಂಸ್ಥಾಪಕರಾದ ರಾಜ್ ಖೋಸ್ಲಾ ಅವರು ದೆಹಲಿಯ ಸಮ್ಮೇಳನದಲ್ಲಿ ಸ್ಫೋಟಕ ಹೇಳಿಕೆ ನೀಡಿ ಸಂಚಲನ ಸೃಷ್ಟಿಸಿದರು: ಪ್ರಸಕ್ತ ರೂಪದ ಐಟಿ ಸೇವೆಗಳು 2030ರ ವೇಳೆಗೆ ಸಂಪೂರ್ಣ ಮಾಯವಾಗುತ್ತವೆ. ಭವಿಷ್ಯದಲ್ಲಿ ಐಟಿ/ಬಿಪಿಒ ಸೇವೆಗಳು ನಶಿಸಿಹೋಗುತ್ತವೆ.

ಗೂಗಲ್ ಡೀಪ್ ಮೈಂಡ್‌ನ ಸಿಇಒ ಡೆಮಿಸ್ ಹಸ್ಸಾಬಿಸ್ ಅವರು ಅದೇ ಸಮ್ಮೇಳನದಲ್ಲಿ, ಎಜಿಐ ವ್ಯಾಪಕವಾಗಿ ಬಳಕೆಯಾಗಲು ಐದರಿಂದ ಹತ್ತು ವರ್ಷಗಳ ಸಮಯ ಬೇಕು ಎಂದಿದ್ದಾರೆ. ಈ ಅವಧಿಯಲ್ಲಿ ಐಟಿ ಕ್ಷೇತ್ರದಲ್ಲಿ ಮಹತ್ವದ ಪ್ರಗತಿ ಸಾಧಿಸಲು ಸಾಕಷ್ಟು ಅವಕಾಶಗಳಿದ್ದು, ಉದ್ಯೋಗಗಳು ನಾಶವಾಗುವುದಕ್ಕಿಂತಲೂ ಹೊಸ ರೂಪಗಳಲ್ಲಿ ಬದಲಾಗುವ ಸಾಧ್ಯತೆ ಹೆಚ್ಚು ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ.

ಭಾರತದ ಐಟಿ ಕಂಪನಿಗಳು ತಮ್ಮ ವಿಶಾಲ ಹಾಗೂ ಬುದ್ಧಿವಂತ ಎಂಜಿನಿಯರ್ ವೇದಿಕೆಯನ್ನು ಬಳಸಿ ಜನರೇಟಿವ್ ಐಟಿ ಸೇವೆಗಳತ್ತ ತ್ವರಿತವಾಗಿ ಮರುಹೊಂದಾಣಿಕೆ ಮಾಡಿ ಕೊಳ್ಳಲು ಆಸ್ಪದವಿರುತ್ತದೆ. ಡಿಸ್ರಪ್ಟಿವ್ ಪರಿಸರವಿದ್ದರೂ ಅವುಗಳನ್ನು ಗೆಲ್ಲಲು ವಿಪುಲ ಅವಕಾಶಗಳು ಲಭ್ಯವಿರುತ್ತವೆ. ಇಂಥ ಡಿಸ್ರಪ್ಷನ್ ವಾತಾವರಣ ಸೃಷ್ಟಿಸಿರುವ ಆಂಥ್ರೋಪಿಕ್ ಸಂಸ್ಥೆಯು ಭಾರತದಲ್ಲಿರುವ ಅವಕಾಶಗಳ ಆಗರವನ್ನು ಅರಿತು ಬೆಂಗಳೂರಿನಲ್ಲಿ ತನ್ನ ನೆಲೆಯನ್ನು ವಿಸ್ತರಿಸುವುದಾಗಿ ಸಾರಿದೆ.

ಆಂಥ್ರೋಪಿಕ್ ಕಂಪನಿಯ ಬದ್ಧ ವೈರಿಯಾದ ಓಪನ್ ಎಐ ತಾನು ಕೂಡ ಬೆಂಗಳೂರಿನಲ್ಲಿ ಎಐ ನೆಲೆ ಸ್ಥಾಪಿಸುವುದಾಗಿ ಕೂಡಲೇ ಹೇಳಿದೆ. ಅನೇಕ ಬೃಹತ್ ಎಂಎನ್‌ಸಿಗಳು ಅವಕಾಶಗಳನ್ನು ಬಾಚಿ ಕೊಳ್ಳಲು ಭಾರತದತ್ತ ಧಾವಿಸುತ್ತಿವೆ. ಬೆಂಬಲವಾಗಿ, ಬ್ಲ್ಯಾಕ್ ಸ್ಟೋನ್‌ನಂಥ ದೈತ್ಯ ಖಾಸಗಿ ಇಕ್ವಿಟಿ ಹಣಕಾಸು ಸಂಸ್ಥೆಗಳು ಎಐ ಕಂಪನಿಗಳಲ್ಲಿ ಭಾರಿ ಹೂಡಿಕೆಯನ್ನು ಮಾಡಿ ಎಐ ಕಂಪನಿಗಳ ವಿತ್ತದ ಅಂತರದ ಸೇತುವೆಯಾಗುತ್ತಿವೆ.

ಮುಂದಿನ ಎರಡು ವರ್ಷಗಳಲ್ಲಿ ಭಾರತದಲ್ಲಿ ಸುಮಾರು ಮುನ್ನೂರು ಬಿಲಿಯನ್ ಡಾಲರ್‌ನಷ್ಟು ಹಣದ ಹೊಳೆಯು ಎಐ ತಂತ್ರಜ್ಞಾನಕ್ಕೆ ಹರಿದುಬರಲಿದೆ.

ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರತಿ ಕ್ಷಣವೂ ಹೊಸ ಆವಿಷ್ಕಾರಗಳಿಂದ ಕ್ರಾಂತಿಯಾಗುತ್ತಲೇ ಇರುತ್ತದೆ. ಎಐ ಮತ್ತು ಎಜಿಐನ ನಂತರದ ಮುಂದಿನ ಆವಿಷ್ಕಾರ ಏಜೆಂಟಿಕ್ ಎಐ. ಇಲ್ಲಿ ಡಿಜಿಟಲ್ ಏಜೆಂಟ್‌ಗಳು ಕೇವಲ ಶಿಫಾರಸು ಮಾಡುವುದಲ್ಲ, ಕಾರ್ಯಗಳನ್ನು ಸ್ವಯಂಚಾಲಿತವಾಗಿ ನಿರ್ವಹಿಸುತ್ತವೆ.

ಈಗಾಗಲೇ ಈ ನಿಟ್ಟಿನಲ್ಲಿ ವ್ಯಾಪಕ ಪ್ರಾರಂಭಿಕ ಸಂಶೋಧನೆಗಳು ದಾಪುಗಾಲಿಟ್ಟು ಮುನ್ನಡೆಯುತ್ತಿವೆ. ಈ ಹಂತದ ಡಿಸ್ರಪ್ಷನ್‌ಗಳಿಗೂ ಸಿದ್ಧವಾಗಲೇಬೇಕಾಗಿದೆ.

ಸೇಲ್ಸ್ ಫೋರ್ಸ್ ಕಂಪನಿಯ ಭಾರತದ ಅಧ್ಯಕ್ಷೆ ಮತ್ತು ಸಿಇಒ (ಹಿಂದಿನ ಎಸ್‌ಬಿಐ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಅಧ್ಯಕ್ಷೆ) ಅರುಂಧತಿ ಭಟ್ಟಾಚಾರ್ಯರವರ ಮಾತಿನಂತೆ, ಎಐ ಪ್ರಗತಿಗಳು ಮಾನವಕುಲಕ್ಕೆ ವರದಾನವಾಗಿದೆ. ಎಐ ಕೆಲವು ಸಾಂಪ್ರದಾಯಿಕ ಉದ್ಯೋಗಗಳನ್ನು ಅನಗತ್ಯಗೊಳಿಸಬಹುದು.

ಆದರೆ ಸಮಾನಾಂತರವಾಗಿ ಪ್ರಾಂ ಎಂಜಿನಿಯರ್ ಗಳು, ಮೆಷಿನ್ ಲರ್ನಿಂಗ್ ತಂತ್ರಜ್ಞರು ಮತ್ತು ಎಐ ಅನುಸರಣಾಧಿಕಾರಿಗಳಂಥ ಹೊಸ ಹಾಗೂ ಹೆಚ್ಚಿನ ಮೌಲ್ಯದ ಉದ್ಯೋಗಗಳನ್ನು ಅದು ಸೃಷ್ಟಿಸುತ್ತದೆ. ಸಾಮಾನ್ಯ ಮತ್ತು ಪುನರಾವರ್ತಿತ ಕೆಲಸಗಳನ್ನು ಸ್ವಯಂ ಚಾಲಿತಗೊಳಿಸುವ ಮೂಲಕ, ಉದ್ಯೋಗಿಗಳು ಭಾವನಾತ್ಮಕ ಬುದ್ಧಿಮತ್ತೆ, ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆ ಅಗತ್ಯವಿರುವ ಹೆಚ್ಚಿನ ಮೌಲ್ಯದ ಕೆಲಸಗಳಿಗೆ ಗಮನ ಹರಿಸಲು ಸಾಧ್ಯವಾಗುತ್ತದೆ.

ಈ ಬದಲಾವಣೆ ಪ್ರಕ್ರಿಯೆಯು ಕೆಲವಷ್ಟು ಕಠಿಣವಾದರೂ, ಅಂತಿಮವಾಗಿ ಹೆಚ್ಚು ಉತ್ಪಾದಕ, ಉತ್ತಮ ಮತ್ತು ಸಮಾವೇಶಿತ ಕೆಲಸದ ವಾತಾವರಣವನ್ನು ನಿರ್ಮಿಸುತ್ತದೆ. ಎಐ ಎಂಬುದು ಮಾನವರನ್ನು ಸಂಪೂರ್ಣವಾಗಿ ಬದಲಿಸುವುದಕ್ಕಿಂತ, ಕೋ-ಪೈಲಟ್ ಆಗಿ ಕಾರ್ಯನಿರ್ವಹಿಸಿ ಮಾನವ ಸಾಮರ್ಥ್ಯವನ್ನು ವೃದ್ಧಿಸುತ್ತದೆ.

ಎಐ ರಿಟ್ರೀವಲ್ ಆಗ್ಮೆಂಟೆಡ್ ಜನರೇಷನ್ (ಅಎ) ಕೇಂದ್ರಗಳು ತಲೆ ಎತ್ತಲಿವೆ. ಆರ್‌ಎಜಿಗಳು, ನವೀನ ಮತ್ತು ಸಂಬಂಧಿತ ಮಾಹಿತಿಯುಳ್ಳ ಡೇಟಾ ಗ್ರಂಥಾಲಯಗಳು ಅಗತ್ಯವಾಗಿದ್ದು, ಅವುಗಳಿಗೆ ಮಾಹಿತಿಯನ್ನು ಪೂರೈಸುವುದು ಭಾರಿ ಪ್ರಮಾಣದ, ಕಾರ್ಮಿಕಾ ಧಾರಿತ ಡೇಟಾ ಸಂಗ್ರಹ ಕಾರ್ಯವಾಗಿದೆ.

ಈ ಕೇಂದ್ರಗಳು ಬಿಪಿಒಗಳ ಬದಲಾಗಿ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸುವ ಸಾಧ್ಯತೆಯಿದೆ. ಜಾಗತಿಕ ಮಟ್ಟದಲ್ಲಿ ಎಐ ಶೃಂಗಸಭೆಗಳು ಕಳೆದ ಕೆಲವು ವರ್ಷಗಳಿಂದ ನಡೆಯುತ್ತಿವೆ. ಹಿಂದಿನ ವರ್ಷ ಪ್ಯಾರಿಸ್‌ನಲ್ಲಿ ಇಂಥ ಸಭೆಯನ್ನು ನಡೆಸಲಾಗಿತ್ತು. ಮುಂದಿನ ಆವೃತ್ತಿ ಎನ್ನಬಹುದಾದ, ಇದೀಗ ದೆಹಲಿಯಲ್ಲಿ ಸಂಪನ್ನಗೊಂಡ ಎಐ ಶೃಂಗಸಭೆಗೆ ಐದು ಲಕ್ಷಕ್ಕೂ ಹೆಚ್ಚು ಉತ್ಸುಕರು ಭೇಟಿಯಿತ್ತರು.

ಮಾತ್ರವಲ್ಲದೆ, ಶಿಬಿರವನ್ನು ಆಸಕ್ತರಿಗಾಗಿ ಒಂದು ಹೆಚ್ಚುವರಿ ದಿನಕ್ಕೆ ವಿಸ್ತರಿಸಿದ್ದು ವಿಶೇಷವಾಗಿತ್ತು. ಈ ಶೃಂಗಸಭೆಯು ಮೂರು ಮೂಲಭೂತ ಸೂತ್ರಗಳ ಮೇಲೆ ಆಧಾರಿತವಾಗಿತ್ತು: ಜನತೆ (ಜನರನ್ನು ಸಬಲಗೊಳಿಸುವುದು), ಭೂಮಿ(ಕೃಷಿಯಲ್ಲಿ ಹೆಚ್ಚು ಬುದ್ಧಿವಂತ ಮತ್ತು ದೀರ್ಘಕಾಲಿಕ ವಿಧಾನಗಳನ್ನು ಅಳವಡಿಸುವುದು), ಹಾಗೂ ಪ್ರಗತಿ (ಎಲ್ಲರಿಗೂ ಲಭ್ಯವಾಗುವ, ಸಮಾವೇಶಿತ ತಂತ್ರಜ್ಞಾನವನ್ನು ಉತ್ತೇಜಿಸುವುದು). ಶೃಂಗಸಭೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಮಾನವ್ ಚೌಕಟ್ಟನ್ನು ಘೋಷಿಸಿದರು.

ಮಾನವ್ ಎಂದರೆ ಮಾನವಕೇಂದ್ರಿತ, ಜವಾಬ್ದಾರಿಯುತ ಮತ್ತು ನೈತಿಕ ಕೃತಕ ಬುದ್ಧಿಮತ್ತೆ ಬಳಕೆಯನ್ನು ಉತ್ತೇಜಿಸುವ ಭಾರತೀಯ ಎಐ ಉಪಕ್ರಮ. ಶೃಂಗಸಭೆಯ ಮುಖ್ಯ ರೂಪಶಿಲ್ಪಿಯಾಗಿ ಭಾರತ ಹೊರಹೊಮ್ಮಿದ್ದು, ಜಾಗತಿಕ ದಕ್ಷಿಣಾರ್ಧ ಗೋಳದ ದೇಶಗಳ ಮುಂಚೂಣಿಯ ಶಕ್ತಿಯೆಂದೆನಿಸಿದೆ. ಮಹಾಸಮ್ಮೇಳನದಲ್ಲಿ 300ಕ್ಕೂ ಅಧಿಕ ಪ್ರದರ್ಶಕರು, 500ಕ್ಕೂ ಹೆಚ್ಚು ಜಾಗತಿಕ ಎಐ ನಾಯಕರು, 20 ರಾಷ್ಟ್ರಗಳ ಮುಖ್ಯಸ್ಥರು ಭಾಗವಹಿಸಿದ್ದರಿಂದಾಗಿ ಇದು ಇತಿಹಾಸದ ಅತಿ ದೊಡ್ಡ ಜಾಗತಿಕ ಎಐ ಸಮ್ಮೇಳನವೆಂದು ಪ್ರಚಲಿತವಾಯಿತು.

ಎಂಬತ್ತಕ್ಕೂ ಅಧಿಕ ದೇಶಗಳು ತಾಂತ್ರಿಕ/ವ್ಯಾವಹಾರಿಕ ನಿರ್ಣಯಕ್ಕೆ ಒಪ್ಪಿಗೆ ನೀಡಿವೆ. ಭಾರತವು ಅಮೆರಿಕ ನೇತೃತ್ವದ ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟಕ್ಕೆ ಹನ್ನೊಂದನೇ ಸದಸ್ಯನಾಗಿ ಅಧಿಕೃತವಾಗಿ ಸೇರ್ಪಡೆಯಾಗಿದೆ.

ಎಐ ಸ್ವೀಕಾರವು ದಾಖಲೆ ಮಟ್ಟದಲ್ಲಿ ವೇಗವಾಗಿ



> » ಈಗ ಪ್ರತಿಯೊಂದು ಮೀಡಿಯಾಗಳಲ್ಲೂ ಹಾಗೂ ಸಾರ್ವಜನಿಕ ಸಂಭಾಷಣೆಗಳಲ್ಲೂ ಚರ್ಚೆಯಾಗುತ್ತಿರುವ ಕೇಂದ್ರೀಕೃತ ವಿಷಯವೆಂದರೆ ಕೃತಕ ಬುದ್ಧಿಮತ್ತೆಯೆಂಬ ಪೆಡಂಭೂತ. ಬಹುಜನರ ತಿಳಿವಳಿಕೆಯಲ್ಲಿ ಇದು ದೆವ್ವವಾದರೆ, ತಿಳಿದವರಲ್ಲಿ ಇದು ದೇವತೆ. ಅಂಥ ತಿಳಿದವರಲ್ಲಿ ದಿಗ್ಗಜರೆನಿಸಿದ ಟಾಟಾ ಸನ್ಸ್‌ನ ಅಧ್ಯಕ್ಷರಾದ ನಟರಾಜನ್ ಚಂದ್ರಶೇಖರನ್, ಎಐ ಕುರಿತು ಇತ್ತೀಚೆಗೆ ನಡೆದ ಚರ್ಚೆಯೊಂದರಲ್ಲಿ ಸರಳವಾಗಿ ವಿವರಿಸುತ್ತಾ, ಎಐ ಒಂದು ಮೂಲಭೂತ ನಾಗರಿಕ ಹಾಗೂ ಮೂಲಸೌಕರ್ಯಾತ್ಮಕ ಬುದ್ಧಿಮತ್ತೆಯ ಬದಲಾವಣೆ.

ವೃತ್ತಿ, ಲಿಂಗ ಮತ್ತು ಕೆಲಸದ ವೈಖರಿಯ ಮೇಲೆ ಅವಲಂಬಿತವಾಗಿ ಪ್ರಗತಿಯಾಗುತ್ತಿದೆ. ಹಣಕಾಸು ಮತ್ತು ಲೆಕ್ಕಪತ್ರ ಕ್ಷೇತ್ರಗಳ ವೃತ್ತಿಪರರು ಎಐಯನ್ನು ಅತಿ ಕಡಿಮೆ ಬಳಸುವವರಾಗಿದ್ದರೆ, ಪತ್ರಕರ್ತರು, ಸಾಫ್ಟ್‌ವೇರ್ ಎಂಜಿನಿಯರ್‌ಗಳು ಮತ್ತು ಮಾರು ಕಟ್ಟೆ ವೃತ್ತಿಪರರು ಎಐಯನ್ನು ಅತ್ಯಂತ ವ್ಯಾಪಕವಾಗಿ ಬಳಸುತ್ತಿದ್ದಾರೆ.

ಇತ್ತೀಚಿನ ಸಂದರ್ಶನವೊಂದರಲ್ಲಿ ಓಪನ್ ಎಐ ಕಂಪನಿಯ ಮುಖ್ಯಸ್ಥರಾದ ಸ್ಯಾಮ್ ಆಲ್ಟ್‌ಮನ್ ಅವರು, ಚ್ಯಾಟ್ ಜಿಪಿಟಿಗೆ ಭಾರತದಲ್ಲಿ ಪ್ರತಿ ವಾರ ಹತ್ತು ಕೋಟಿಗಿಂತ ಹೆಚ್ಚು ಸಕ್ರಿಯ ಬಳಕೆದಾರರಿದ್ದಾರೆ ಎಂದರು.

ಅಮೆರಿಕದ ನಂತರ ಭಾರತವು ಈ ವೇದಿಕೆಯ ಅತ್ಯಂತ ಸಕ್ರಿಯ ಮಾರುಕಟ್ಟೆ; ಇಲ್ಲಿ ಗಮನಾರ್ಹ ವಿಷಯವೆಂದರೆ, ಪ್ರಸ್ತುತ 900 ಮಿಲಿಯನ್ ಬಳಕೆದಾರರನ್ನು ಹೊಂದಿರುವ ಚ್ಯಾಟ್ ಜಿಪಿಟಿ, ಅತ್ಯಂತ ಜನಪ್ರಿಯ ಸಾಮಾಜಿಕ ಮಾಧ್ಯಮಗಳಾದ ಇನ್ಸ್ಟಾಗ್ರಾಮ್, ಟಿಕ್‌ಟಾಕ್ ಅಥವಾ ನೆಟ್‌ಫ್ಲಿಕ್ಸ್‌ಗಳಿಗಿಂತಲೂ ಬಹಳ ಕಡಿಮೆ ಅವಧಿಯಲ್ಲಿ ಈ ಮಟ್ಟವನ್ನು ತಲುಪಿ, ಎಐ ನಮ್ಮ ಜೀವನದಲ್ಲಿ ದೈನಂದಿನ ಕಾರ್ಯಗಳಿಗೆ ಅನಿವಾರ್ಯ ಮಾಧ್ಯಮವೆನಿಸಿದೆ.

ಚ್ಯಾಟ್ ಜಿಪಿಟಿಗೆ ಸ್ಪರ್ಧಿಯಾಗಿ ಜಾಗತಿಕ ಮಟ್ಟದಲ್ಲಿ ಗೂಗಲ್‌ನ ಜೆಮಿನೈ, ಮೈಕ್ರೋ ಸಾಫ್ಟ್‌ನ ಕ್ಯಾಪಿಲೋಟ್, ಮೆಟಾದ ಮಾ ವೇದಿಕೆಗಳು ಪೈಪೋಟಿ ನಡೆಸಿವೆ. ಇವೆಲ್ಲವನ್ನೂ ಚ್ಯಾಟ್ ಜಿಪಿಟಿಯಷ್ಟು ವೇಗವಾಗಲ್ಲದಿದ್ದರೂ ವ್ಯಾಪಕವಾಗಿ ಬಳಸಲಾಗುತ್ತಿದ್ದು, ಅವು ತ್ವರಿತವಾಗಿ ಎಡೆ ವಿಸ್ತರಿಸುತ್ತಿವೆ.

ಸರ್ವಮ ಎಐ ಮತ್ತು ಭಾರತ್‌ಜೆನ್ ನಮ್ಮ ದೇಶದಲ್ಲಿ ಅಭಿವೃದ್ಧಿಯಾಗುತ್ತಿರುವ ಪ್ರಮುಖ ಜನರೇಟಿವ್ ಎಐ ಪ್ರಯತ್ನಗಳಾಗಿವೆ. ಸರ್ವಮ್ ಮಾದರಿಗಳು, ಭಾರತಕ್ಕೆ ಹೊಂದುವ ಸಂಭಾಷಣಾತ್ಮಕ ಎಐ ಪರಿಹಾರಗಳತ್ತ ಗಮನ ಹರಿಸಿದೆ.

ಭಾರತ್‌ಜೆನ್ ಯೋಜನೆಯು ಭಾರತೀಯ ಭಾಷೆಗಳು, ಸಂಸ್ಕೃತಿ ಮತ್ತು ಸಾರ್ವಜನಿಕ ಡೇಟಾವನ್ನು ಒಳಗೊಂಡ ಸ್ವದೇಶಿ ಮಾದರಿಗಳನ್ನು ನಿರ್ಮಿಸುವ ಉದ್ದೇಶ ಹೊಂದಿದ್ದು, ಶಿಕ್ಷಣ, ಆಡಳಿತ ಮತ್ತು ಉದ್ಯಮ ಕ್ಷೇತ್ರಗಳಲ್ಲಿ ಬಳಸಬಹುದಾದ ಎಐ ಪರಿಹಾರಗಳನ್ನು ನೀಡಲು ಪ್ರಯತ್ನಿಸುತ್ತಿದೆ.

ಮೇಲೆ ಉಲ್ಲೇಖಿಸಲಾದ ಚರ್ಮಕುಟೀರಕ್ಕೆ ಕೆಲ ದಿನಗಳ ನಂತರ ಮತ್ತೆ ಭೇಟಿಯಿತ್ತಿದ್ದೆ. ಪರಿಚಯದ ಆ ಶ್ರಮಿಕನಿಗೆ ಕೃತಕ ಬುದ್ಧಿಮತ್ತೆಯ ಕುರಿತಾಗಿ ಸರಳಭಾಷೆಯಲ್ಲಿ ತಿಳಿ ಹೇಳಿದೆ. ಅವನ ಸುಕ್ಕುಗಟ್ಟಿದ ಮುಖದಲ್ಲಿ ಮೂಡಿದ ಮಂದಹಾಸದ ಗೆರೆಗಳು, ವಿಷಯವು ಅವನಿಗೆ ಅರ್ಥವಾಯಿತೆಂಬ ಸಂದೇಶ ನೀಡಿದವು....

- ಪ್ರಕಾಶ ಹೆಗಡೆ, (ಲೇಖಕರು ಚಾರ್ಟರ್ಡ್ ಅಕೌಂಟೆಂಟ್ ಮತ್ತು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಬವಣೆಯ ಬೆಂಕಿಯಲ್ಲಿ ಬೆಂದು ಬಳಲಿ ಬಂದ ಬೆನ್ಜ್ ಕಾರು

■ **ಕರ್ಲ್ ಬೆನ್ಜ್ ಹುಟ್ಟಿದ್ದು 1844ರ ನವೆಂಬರ್‌ನಲ್ಲಿ, ಜರ್ಮನಿಯ ಮ್ಯುಲ್ಬರ್ಗ್‌ನಲ್ಲಿ, ಆರ್ಥಿಕವಾಗಿ ಅಷ್ಟೇನೂ ಸದೃಢವಾಗಿರದ ಕುಟುಂಬದಲ್ಲಿ. ತಂದೆ ರೈಲ್ವೆ ಚಾಲಕರಾಗಿದ್ದರಿಂದ ಸಂಸಾರವೇನೋ ನಡೆಯುತ್ತಿತ್ತು. ಆದರೆ ಕಾರ್ಲ್ ಬೆನ್ಜ್‌ಗೆ ಎರಡು ವರ್ಷ ತುಂಬುತ್ತಿದ್ದಂತೆ ತಂದೆ ತೀರಿ ಹೋದರು, ತಾಯಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದರು.**

ವಿದೇಶವಾಸಿ ಹೆಸರಿನಲ್ಲಿಯೇ ಕಾರ್ ಇರುವಾಗ ಕಾರು ತಯಾರು ಮಾಡದೆ ಅವರಾದರೂ ಹೇಗೆ ಸುಮ್ಮನೆ ಕುಳಿತಾರು? ಅವರಿಗೆ ಕಷ್ಟವಾಯಿತು, ಸಾಕಷ್ಟು ಅಡೆತಡೆಗಳು ಎದುರಾದವು. ಅವನ್ನೆಲ್ಲ ಮೀರಿ ಇಂದಿಗೂ ಶಾಶ್ವತವಾಗಿ ನಿಲ್ಲುವ ಕಾರಿನ ಹೆಸರೊಂದನ್ನು ಅವರು ನೂರಕ್ಕೂ ಹೆಚ್ಚು ವರ್ಷದ ಹಿಂದೆಯೇ ಬರೆದಿಟ್ಟಿದ್ದರು.

ನಾನು ಪ್ರೌಢಶಾಲೆಗೆ ಬರುವವರೆಗೂ ಆ ಹೆಸರನ್ನು ಕೇಳಿದ ನೆನಪಿಲ್ಲ, ಪ್ರಾಥಮಿಕ ಶಾಲೆಯಲ್ಲಿ ಎಲ್ಲೋ ಒಂದೆರಡು ಬಾರಿ ಕೇಳಿದ್ದರೂ ನೆನಪಿಟ್ಟುಕೊಳ್ಳುವಷ್ಟು ಅದು ಸುಲಭವಾಗಿರಲಿಲ್ಲ. ಆ ದಿನಗಳಲ್ಲಿ ನಮ್ಮೂರಲ್ಲಿ ಅಂಬಾಸಿಡರ್, ಫಿಯೆಟ್ ಬಿಟ್ಟರೆ ಆ ಹೆಸರಿನ ಕಾರು ಇದ್ದದ್ದಾಗಲಿ, ಇದ್ದರೂ ನನ್ನ ಕಣ್ಣಿಗೆ ಬಿದ್ದದ್ದಾಗಲಿ ನೆನಪಾಗುತ್ತಿಲ್ಲ.

ಕಾಲೇಜು ಮುಗಿಸಿ ನೌಕರಿಗೆ ಸೇರಿಕೊಂಡಾಗಲೂ ಆ ಹೆಸರಿನ ಕಾರು ಮಾತ್ರ ತಯಾರಾಗುತ್ತದೆ ಎಂದೇ ಭಾವಿಸಿದ್ದೆ. ನಾನು ಉದ್ಯೋಗಕ್ಕಾಗಿ ಸೌದಿ ಅರೇಬಿಯಾಕ್ಕೆ ಬಂದಾಗ, ಮೊದಲ ಬಾರಿ ಆ ಕಂಪನಿಯವರು ಕಾರನ್ನಷ್ಟೇ ಅಲ್ಲ, ಬಸ್, ಟ್ರಕ್ ಇತ್ಯಾದಿ ವಾಹನಗಳನ್ನೂ ತಯಾರಿಸುತ್ತಾರೆ ಎಂದು ಗೊತ್ತಾದದ್ದು.

ಈಗಂತೂ ಕೇಳುವುದೇ ಬೇಡ. ವಿಶ್ವದ ಅತ್ಯಂತ ಹಳೆಯ ಮತ್ತು ಐಷಾರಾಮಿ ಕಾರು ಕಂಪನಿಗಳಲ್ಲಿ ಇದು ಒಂದಾಗಿದ್ದು, ಸುಮಾರು 80 ಬಿಲಿಯನ್ ಡಾಲರ್ ಮೌಲ್ಯವುಳ್ಳ ಸಂಸ್ಥೆಯಾಗಿದೆ. ಟಾಂಗಾಕ್ಕೆ ಕುದುರೆ ಕಟ್ಟಿಕೊಂಡು ಓಡಾಡುತ್ತಿದ್ದ ಆ ಕಾಲದಲ್ಲಿ, ಕುದುರೆ ರಹಿತ ಗಾಡಿಯನ್ನು ನಿರ್ಮಿಸುವ ದಾರಿಯಲ್ಲಿ ಅದೆಷ್ಟೋ ಕಷ್ಟ, ಸವಾಲು, ಅನುಮಾನ, ಅವಮಾನ ಮತ್ತು ವೈಫಲ್ಯಗಳನ್ನು ಎದುರಿಸಿ, ಕನಸನ್ನು ಸಾಕಾರಗೊಳಿಸಿಕೊಂಡ ವ್ಯಕ್ತಿ ಅವರು.

19ನೇ ಶತಮಾನದ ಉತ್ತರಾರ್ಧದಲ್ಲಿ ತಮ್ಮ ಸಣ್ಣ ಉದ್ಯಮವನ್ನು ವಿಶ್ವದ ಪ್ರಥಮ ಮತ್ತು ಅತಿ ದೊಡ್ಡ ಕಾರು ಉತ್ಪಾದನಾ ಕಂಪನಿಯಾಗಿ ಪರಿವರ್ತಿಸಿದ ಹಾನುಭಾವ ಅವರು. ಆಟೋಮೊಬೈಲ್ ಉದ್ಯಮಕ್ಕೆ ಉಸಿರು ಕೊಟ್ಟು, ಜೀವ ತುಂಬಿದ ವ್ಯಕ್ತಿ ಅವರು ಎಂದರೆ ತಪ್ಪಾಗಲಾರದು. ಜತೆಗೆ, ಅವರಿಗಿಂತಲೂ ಅವರ ಮಡದಿಯಿಂದಾಗಿ ಇದೆಲ್ಲ ಸಾಧ್ಯವಾಯಿತು, ಇದರಲ್ಲಿ ಬಹುಪಾಲು ಶ್ರೇಯ ಮಡದಿಗೂ ಸಲ್ಲಬೇಕು ಎಂದರೆ ಅತಿಶಯೋಕ್ತಿಯಾಗಲಾರದು.

ಕರ್ಲ್ ಬೆನ್ಜ್ ಹುಟ್ಟಿದ್ದು 1844ರ ನವೆಂಬರ್‌ನಲ್ಲಿ, ಜರ್ಮನಿಯ ಮ್ಯುಲ್ಬರ್ಗ್‌ನಲ್ಲಿ, ಆರ್ಥಿಕವಾಗಿ ಅಷ್ಟೇನೂ ಸದೃಢವಾಗಿರದ ಕುಟುಂಬದಲ್ಲಿ. ತಂದೆ ರೈಲ್ವೆ ಚಾಲಕರಾಗಿದ್ದರಿಂದ ಸಂಸಾರವೇನೋ ನಡೆಯುತ್ತಿತ್ತು. ಆದರೆ ಕಾರ್ಲ್ ಬೆನ್ಜ್‌ಗೆ ಎರಡು ವರ್ಷ ತುಂಬುತ್ತಿದ್ದಂತೆ ತಂದೆ ತೀರಿ ಹೋದರು, ತಾಯಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದರು.

ಬಡತನದ ಬದುಕು, ಖಾಲಿ ಹೊಟ್ಟೆಯಲ್ಲಿ ಮಲಗುತ್ತಿದ್ದ ಕಾರ್ಲ್ ಬೆನ್ಜ್ ಬಾಲ್ಯ ಸುಲಭವಾಗಿರಲಿಲ್ಲ. ಎಷ್ಟೇ ಕಷ್ಟವಾದರೂ ಮಗನಿಗೆ ಉತ್ತಮ ಶಿಕ್ಷಣ ಕೊಡಿಸುವುದಕ್ಕಾಗಿ ತಾಯಿ, ತಮ್ಮಿಂದ ಸಾಧ್ಯವಿರುವ ಎಲ್ಲವನ್ನೂ ಮಾಡಿದರು. ಅದರಿಂದಾಗಿ ಕಾರ್ಲ್ ಶಿಕ್ಷಣದಿಂದ ದೂರ ಇರುವುದು ತಪ್ಪಿತು. ಪ್ರತಿಭಾವಂತರಾಗಿದ್ದ ಕಾರಣ 15ನೇ ವರ್ಷಕ್ಕೆ ಮೆಕ್ಯಾನಿಕಲ್ ಎಂಜಿನಿಯರಿಂಗ್‌ಗೆ ಪ್ರವೇಶ ಪಡೆದ ಕಾರ್ಲ್ ಉತ್ತೀರ್ಣರೂ ಆದರು.

ಎಂಜಿನಿಯರಿಂಗ್ ಓದುತ್ತಿದ್ದಾಗ ಕಾರ್ಲ್‌ಗೆ ಫರ್ಡಿನಾಂಡ್ ರೆಡನ್‌ಬಾರ್ಕ ಎಂಬ ಶಿಕ್ಷಕರ ಪರಿಚಯವಾಯಿತು. ಆ ಕಾಲದಲ್ಲಿ ಜರ್ಮನಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಅನ್ನು ಕಾರ್ಯಾಗಾರದಿಂದ ತಾಂತ್ರಿಕ ವಿಜ್ಞಾನವಾಗಿ ಪರಿವರ್ತಿಸಿದ ಪ್ರಮುಖ ವ್ಯಕ್ತಿ ಎಂದು ಫರ್ಡಿನಾಂಡ್‌ರನ್ನು ಪರಿಗಣಿಸಲಾಗುತ್ತಿತ್ತು.

ಆ ಕಾಲದಲ್ಲಿ ಹೆಚ್ಚಾಗಿ ರೈಲ್ವೆ ಮತ್ತು ದೋಣಿಗಳಿಗೆ ಬಳಸಲಾಗುತ್ತಿದ್ದ ಉಗಿಯಂತ್ರಗಳು ಹಳೆಯದಾಗುತ್ತಿವೆ, ಪ್ರಪಂಚಕ್ಕೆ ಹೊಸತೇನಾದರೂ ಕೊಡಬೇಕು ಎಂದು ಸೈಕಲ್‌ನಲ್ಲಿ ಸುತ್ತುತ್ತಿದ್ದ ಕಾರ್ಲ್ ಕನಸು ಕಾಣುತ್ತಿದ್ದರು, ಸಂಭಾವ್ಯ ಮಾರ್ಗಗಳ ಹುಡುಕಾಟದಲ್ಲಿ ತೊಡಗಿದ್ದರು. ಆ ಹೊತ್ತಿಗಾಗಲೇ ಕೆಲ ಸಂಶೋಧಕರು ಆಟೋ ಮೊಬೈಲ್ ಯಂತ್ರವನ್ನು ಪ್ರಯತ್ನಿಸಿದ್ದರು.

ಅವರಲ್ಲಿ ಕೆಲವರು ಸ್ವಯಂಚಾಲಿತ ವಾಹನಗಳನ್ನು ನಿರ್ಮಿಸುವಲ್ಲಿ ಯಶಸ್ವಿಯೂ ಆಗಿದ್ದರು. ಆದರೆ ಆರಂಭಿಕ ಆವಿಷ್ಕಾರಗಳು ಸಂಪೂರ್ಣವಾಗಿ ಪ್ರಾಯೋಗಿಕವಾಗಿರಲಿಲ್ಲ, ಯಶಸ್ವಿಯೂ ಆಗಿರಲಿಲ್ಲ. ಏಕೆಂದರೆ ಅವುಗಳಲ್ಲಿ ಹೆಚ್ಚಿನ ವಾಹನಗಳು ಉಗಿಯಂತ್ರ ತಂತ್ರಜ್ಞಾನವನ್ನು ಆಧರಿಸಿದ್ದವು. ಇದಕ್ಕೆಲ್ಲ ಶಿಕ್ಷಕ ರೆಡೆನ್‌ಬಾರ್ಕ ಅವರೇ ಮಾರ್ಗದರ್ಶಕರಾಗಿದ್ದಾರೆ ಎನ್ನುವುದು ಕಾರ್ಲ್ ಗಮನಕ್ಕೆ ಬಂದಿತ್ತು.

ಇದೆಲ್ಲವನ್ನು ಮೀರಿ ಸಂಪೂರ್ಣವಾಗಿ ವಿಭಿನ್ನ ಪರಿಕಲ್ಪನೆಯ ಯಂತ್ರವನ್ನು ತಯಾರಿಸಬೇಕು ಎಂದು ಕಾರ್ಲ್ ಮೊದಲ ಬಾರಿ ಹೇಳಿಕೊಂಡಾಗ ಜನರು ನಕ್ಕಿದ್ದರು. ಯಾವತ್ತೂ ಹಾಗೆಯೇ, ಈ ಲೋಕದಲ್ಲಿ ಹೊಸ ಅನ್ವೇಷಣೆ ಅರ್ಥವಾಗದಿದ್ದಾಗ ನಗುವವರೇ ಹೆಚ್ಚು. ಆದರೆ ಕಾರ್ಲ್ ತಲೆಕೆಡಿಸಿಕೊಳ್ಳಲಿಲ್ಲ.

ಎಂಜಿನಿಯರಿಂಗ್ ಪದವಿ ಪಡೆದ ನಂತರ 19ನೇ ವಯಸ್ಸಿನಲ್ಲಿ ಎಂಜಿನಿಯರಿಂಗ್ ಮತ್ತು ನಿರ್ಮಾಣ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. 7 ವರ್ಷ ಕಾಲ ಉದ್ಯೋಗ ಮಾಡಿದರೂ ಅದಕ್ಕೆ ಅವರಿಗೆ ಹೊಂದಿಕೊಳ್ಳಲು ಸಾಧ್ಯವಾಗಲಿಲ್ಲ. ಏಕೆಂದರೆ ಅವರ ಬಯಕೆಗಳು, ಆಕಾಂಕ್ಷೆಗಳು ಬೇರೆಯೇ ಆಗಿದ್ದವು. 1871ರಲ್ಲಿ, 27ನೇ ವಯಸ್ಸಿನಲ್ಲಿ ತಮ್ಮದೇ ಉದ್ಯಮವನ್ನು ಅವರು ಆರಂಭಿಸಿದ್ದರು. ಅಗ ರಿಟ್ಟರ್ ಎಂಬ ಮೆಕ್ಯಾನಿಕ್ ಜತೆ ಕಾರ್ಲ್ ಪಾಲುಗಾರಿಕೆಯ ಒಪ್ಪಂದ ಮಾಡಿಕೊಂಡರು.

ಆರಂಭದಲ್ಲಿ ಕಬ್ಬಿಣದ ಫೌಂಡ್ರಿ ಮತ್ತು ಮೆಕ್ಯಾನಿಕಲ್ ಕಾರ್ಯಾಗಾರವನ್ನು ಆರಂಭಿಸಿದರು. ಜತೆಗೆ ಯಂತ್ರೀಕೃತ ಕ್ಯಾರೇಜನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸುತ್ತಲೇ ಇದ್ದರು. ಆದರೆ ಅದೃಷ್ಟ ಕೈಕೊಟ್ಟಿತು. ಪಾಲುದಾರನಾಗಿ ಬಂದಿದ್ದ ಅಗ ವಿಶ್ವಾಸಕ್ಕೆ ಅರ್ಹನಲ್ಲ ಎಂದು ಅವರಿಗೆ ಅರ್ಥವಾಯಿತು. ಅದರಿಂದ ನಷ್ಟ ಅನುಭವಿಸಿದರು. ಸಾಲದು ಎಂಬಂತೆ ಅವರ ಉಪಕರಣಗಳನ್ನು ಸ್ಥಳೀಯ ಅಧಿಕಾರಿಗಳು ವಶಪಡಿಸಿಕೊಂಡರು.

ಒಂದು ವರ್ಷದಲ್ಲಿಯೇ ಕಾರ್ಲ್ ಹೈರಾಣಾಗಿಬಿಟ್ಟಿದ್ದರು. ಅದೃಷ್ಟ ಸದಾ ಒಂದೇ ರೀತಿ ಇರುವುದಿಲ್ಲ. ಒಂದು ಕಡೆ ಅದೃಷ್ಟ ಕೈಕೊಟ್ಟರೂ ಇನ್ನೊಂದು ಕಡೆ ಅದೃಷ್ಟವೇ ಅವರ ಕೈ ಹಿಡಿಯಿತು. ಅವರಿಗೆ ಬರ್ತಾ ರಿಂಗರ್ ಎಂಬ ಮಹಿಳೆ ಭೇಟಿಯಾದರು. ಶ್ರೀಮಂತ ಕುಟುಂಬದ ಬರ್ತಾ, ಅಗ ಜಾಗದಲ್ಲಿ ಪಾಲುದಾರರಾಗಿ ಬಂದರು. ಅವರು ಸಮಾನವಾಗಿ ಜವಾಬ್ದಾರಿಯನ್ನೂ ಹಂಚಿಕೊಂಡರು.

ವ್ಯವಹಾರದಲ್ಲಿ ಸಂಪೂರ್ಣ ನಿಯಂತ್ರಣವನ್ನೂ ಇಟ್ಟುಕೊಂಡರು. ಇದರಿಂದಾಗಿ ಮುಂದಿನ ಹತ್ತು ವರ್ಷ ವ್ಯವಹಾರ ಸುಗಮವಾಗಲು ಸಾಧ್ಯವಾಯಿತು. ಕಾರ್ಲ್ ತಮ್ಮ ಹುಡುಕಾಟದ ಹಾದಿಯಲ್ಲಿ ಒಂದು ಹಂತದ ಯಶಸ್ಸನ್ನು ಸಾಧಿಸಿದ್ದರು. 1879ರ ವೇಳೆಗೆ 2 ಸ್ಟ್ರೋಕ್ ಗ್ಯಾಸೊಲಿನ್ ಎಂಜಿನ್ ಅಭಿವೃದ್ಧಿಪಡಿಸಿದ್ದರು. ಎಂಜಿನ್‌ನ ವೇಗದ ನಿಯಂತ್ರಣ ವ್ಯವಸ್ಥೆ, ಬ್ಯಾಟರಿ ವ್ಯವಸ್ಥೆಯ ಮೂಲಕ ಇಗ್ನಿಷನ್, ಸ್ಪಾರ್ಕ್ ಪ್ಲಗ್, ಕಾರ್ಬರೇಟರ್, ಗೇರ್ ಶಿಫ್ಟ್ ಮತ್ತು ರೇಡಿಯೇಟರ್‌ನಂಥ ಆವಿಷ್ಕಾರಗಳನ್ನು ಮಾಡಿದರು. ಅದಕ್ಕೆಲ್ಲ ಅಮೆರಿಕದಿಂದ ಪೇಟೆಂಟ್ ಪಡೆದರು. ಇದರಿಂದಾಗಿ ವ್ಯಾಪಾರದಲ್ಲಿ ಹೆಚ್ಚಿನ ಉತ್ಪನ್ನಗಳನ್ನು ಸೇರಿಸಿಕೊಳ್ಳಲು ಅವರಿಗೆ ಅವಕಾಶವಾಯಿತು. ಆದರೆ ಇವುಗಳೆಲ್ಲದರ ಉತ್ಪಾದನಾ ವೆಚ್ಚ ಹೆಚ್ಚು ಎಂದು ಅವರಿಗೆ ಅನ್ನಿಸುತ್ತಿತ್ತು.

ಏಕೆಂದರೆ ವ್ಯಾಪಾರ ಕೆಲವು ದಿನ ಉತ್ತಮವಾಗಿ ನಡೆದರೂ, ಕ್ರಮೇಣ ಇದನ್ನು ಕೊಳ್ಳುವವರು ಕಡಿಮೆಯಾದರು. ಆಗ ಬೇರೆ ಹೂಡಿಕೆದಾರರನ್ನು ಜತೆಗೂಡಿಸಿಕೊಳ್ಳಲು ಬ್ಯಾಂಕ್‌ನವರು ಒತ್ತಾಯಿಸಿದರು. 1882ರಲ್ಲಿ ಕಾರ್ಲ್ ತಮ್ಮ ಉದ್ಯಮವನ್ನು ಜಂಟಿ ಸ್ಟಾಕ್ ಕಂಪನಿಯಾಗಿ ಪರಿವರ್ತಿಸಿಕೊಂಡರು. ಆದರೆ ಆ ಕಂಪನಿಯ ಷೇರುಗಳಲ್ಲಿ 5 ಪ್ರತಿಶತ ಮಾತ್ರ ಅವರಿಗೆ ಸಿಗುತ್ತಿತ್ತು. ಆದ್ದರಿಂದ ಪ್ರಮುಖ ಸ್ಥಾನದಿಂದ ಕಾರ್ಲ್‌ರನ್ನು ಕೆಳಗೆ ಇಳಿಸಲಾಯಿತು. ಕ್ರಮೇಣ ಹೊಸ ಹೂಡಿಕೆದಾರರು ಕಾರ್ಲ್‌ರ ಆಲೋಚನೆಗಳನ್ನೂ ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಅಲ್ಲದೆ, ಹೊಸ ಉತ್ಪನ್ನಗಳ ಕಡೆಗೆ ಹೆಚ್ಚಿನ ಗಮನಹರಿಸಿದ್ದರು. ಇದರಿಂದ ಕಾರ್ಲ್ ಅವರ ಅನ್ವೇಷಣೆಗಾಗಲಿ, ವಿನ್ಯಾಸಕ್ಕಾಗಲಿ ಯಾವ ಮಹತ್ವವೂ ಸಿಗುತ್ತಿರಲಿಲ್ಲ.

ಇದರಿಂದ ಹತಾಶರಾದ ಕಾರ್ಲ್ ಬೆನ್ಜ್ ತಮ್ಮ ವಸ್ತುಗಳನ್ನು ಕಟ್ಟಿಕೊಂಡು ಕಂಪನಿಯಿಂದ ಹೊರ ನಡೆದರು. ತಾವೇ ಸ್ಥಾಪಿಸಿದ ಕಂಪನಿಯಿಂದ ಹೊರಬರುವ ನಿರಾಶೆ ಮತ್ತು ವೇದನೆ ಕಾರ್ಲ್ ಬೆನ್ಜ್ ಅವರನ್ನು ಯಶಸ್ಸಿನ ದಾರಿಯಲ್ಲಿ ನಡೆಯಲು ಗಟ್ಟಿಗೊಳಿಸಿತು. ಅವರು ಪತ್ನಿಯೊಂದಿಗೆ ಇನ್ನಿಬ್ಬರನ್ನು ಸೇರಿಸಿಕೊಂಡು ಇನ್ನೊಂದು ಸಂಸ್ಥೆಯನ್ನು ಕಟ್ಟಿದರು. ಅದು ಅಲ್ಪಾವಧಿಯಲ್ಲಿಯೇ ಸಾಕಷ್ಟು ಲಾಭದಾಯಕವಾಗಿದ್ದರಿಂದ ಇಪ್ಪತ್ತೈದು ಜನ ಸಿಬ್ಬಂದಿಯನ್ನು ಸಂಸ್ಥೆಗೆ ಸೇರಿಸಿಕೊಂಡರು.

1885ರಲ್ಲಿ ಅವರು ನಿರ್ಮಿಸಿದ ಮೂರು ಗಾಲಿಯ, ಎರಡು

ಕಬ್ಬಿಣದ ಫೌಂಡ್ರಿ ಮತ್ತು ಮೆಕ್ಯಾನಿಕಲ್ ಕಾರ್ಯಾಗಾರವನ್ನು ಆರಂಭಿಸಿದ ಕರ್ಲ್ ಬೆನ್ಜ್

- ಯಂತ್ರೀಕೃತ ಕ್ಯಾರೇಜನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸುತ್ತಲೇ ಇದ್ದರು. ಆದರೆ ಅದೃಷ್ಟ ಕೈಕೊಟ್ಟಿತು.
- ಪಾಲುದಾರನಾಗಿ ಬಂದಿದ್ದ ಅಗ ವಿಶ್ವಾಸಕ್ಕೆ ಅರ್ಹನಲ್ಲ ಎಂದು ಅವರಿಗೆ ಅರ್ಥವಾಯಿತು. ಅದರಿಂದ ನಷ್ಟ ಅನುಭವಿಸಿದರು.
- ಸಾಲದು ಎಂಬಂತೆ ಅವರ ಉಪಕರಣಗಳನ್ನು ಸ್ಥಳೀಯ ಅಧಿಕಾರಿಗಳು ವಶಪಡಿಸಿಕೊಂಡರು.
- ಒಂದು ವರ್ಷದಲ್ಲಿಯೇ ಕಾರ್ಲ್ ಹೈರಾಣಾಗಿಬಿಟ್ಟಿದ್ದರು. ಅದೃಷ್ಟ ಸದಾ ಒಂದೇ ರೀತಿ ಇರುವುದಿಲ್ಲ.
- ಒಂದು ಕಡೆ ಅದೃಷ್ಟ ಕೈಕೊಟ್ಟರೂ ಇನ್ನೊಂದು ಕಡೆ ಅದೃಷ್ಟವೇ ಅವರ ಕೈ ಹಿಡಿಯಿತು. ಅವರಿಗೆ ಬರ್ತಾ ರಿಂಗರ್ ಎಂಬ ಮಹಿಳೆ ಭೇಟಿಯಾದರು.
- ಶ್ರೀಮಂತ ಕುಟುಂಬದ ಬರ್ತಾ, ಅಗ ಜಾಗದಲ್ಲಿ ಪಾಲುದಾರರಾಗಿ ಬಂದರು. ಅವರು ಸಮಾನವಾಗಿ ಜವಾಬ್ದಾರಿಯನ್ನೂ ಹಂಚಿಕೊಂಡರು.
- ವ್ಯವಹಾರದಲ್ಲಿ ಸಂಪೂರ್ಣ ನಿಯಂತ್ರಣವನ್ನೂ ಇಟ್ಟುಕೊಂಡರು. ಇದರಿಂದಾಗಿ ಮುಂದಿನ ಹತ್ತು ವರ್ಷ ವ್ಯವಹಾರ ಸುಗಮವಾಗಲು ಸಾಧ್ಯವಾಯಿತು.

ಆಸನದ ವಾಹನ, ಮೊದಲ ಮೋಟರ್ ವ್ಯಾಗನ್ ಎಂದೇ ಜನರು ಪರಿಗಣಿಸಿದರು. ವಾಹನ ಗಂಟೆಗೆ 7 ಮೈಲುಗಳಷ್ಟು ಮಾತ್ರ ಚಲಿಸಬಹುದಾಗಿತ್ತು. ಒಂದು ವರ್ಷ ಪರೀಕ್ಷಿಸಿ, ಪರಿಷ್ಕರಿಸಿ, 1886ರ ವೇಳೆಗೆ ಸಾರ್ವಜನಿಕರು ಓಡಿಸಲು ಯೋಗ್ಯವಾದ ವಾಹನ ಸಿದ್ಧವಾಗಿತ್ತು.

ಆದರೆ ಎಲ್ಲ ಊರಿನಲ್ಲೂ, ಎಲ್ಲ ದೇಶದಲ್ಲೂ ವಿಮರ್ಶಕರು ಇದ್ದೇ ಇರುತ್ತಾರೆ. ಕೆಲವರು ಕಾರ್ಲ್ ಬೆನ್ಜ್ ಅವರ ವಾಹನವನ್ನು ಮೆಚ್ಚಿದರು. ಹೆಚ್ಚಿನ ಜನರು ಯಂತ್ರದ ಬಗ್ಗೆ ಸಂಶಯ ವ್ಯಕ್ತಪಡಿಸಿದರು. ಆ ಕಾಲದಲ್ಲಿ ಜನರಲ್ಲಿ ಭಯ ಹೇಗಿತ್ತು ಎಂದರೆ, ಅವರೆಲ್ಲ ವಾಹನ ಸ್ಫೋಟಗೊಳ್ಳಬಹುದು ಎಂಬ



ಆತಂಕಕ್ಕೆ ಒಳಗಾಗಿದ್ದರು. ಅದರಿಂದ ವಾಹನದಲ್ಲಿ ಕುಳಿತು ಓಡಾಡುವವರು ಒಂದು ಕಡೆ ಇರಲಿ, ಆ ವಾಹನ ಬೀದಿಗಿಳಿದಾಗ ಅಕ್ಕಪಕ್ಕದಲ್ಲಿ ಓಡಾಡುವುದನ್ನೂ ಕೆಲವರು ಬಯಸುತ್ತಿರಲಿಲ್ಲ.

ಕಾರ್ಲ್ ಅವರ ಕಂಪನಿಯ ಪಾಲುದಾರರಿಗೂ ಇದರ ಬಗ್ಗೆ ಹೆಚ್ಚು ಸಮಾಧಾನವಿರಲಿಲ್ಲ. ಕಾರ್ಲ್ ಬೆನ್ಜ್ ಅವರ ಆವಿಷ್ಕಾರ ಹೇಗೆ ಉಪಯುಕ್ತವಾಗಬಹುದು ಎಂದು ಅವರಿಗೆ ಅರ್ಥವೇ ಆಗಲಿಲ್ಲ. ಈ ವಾಹನಕ್ಕಿಂತ ವೇಗವಾಗಿ ಹೋಗುವ ಕುದುರೆ ಟಾಂಗ ಇರುವಾಗ, ಇದನ್ನು ಯಾರಾದರೂ ಯಾಕೆ ಖರೀದಿಸುತ್ತಾರೆ? ಎಂದು ಅವರು ವಾದಿಸುತ್ತಿದ್ದರು.

ಆದರೆ ಯಾವುದಕ್ಕೂ ಜಗ್ಗದ ಕಾರ್ಲ್ 1888ರಲ್ಲಿ ಮಾರಾಟ ಮಾಡಲೆಂದು ಕಾರುಗಳನ್ನು ತಯಾರಿಸಲು ಪ್ರಾರಂಭಿಸಿದ ವಿಶ್ವದ ಮೊದಲ ವ್ಯಕ್ತಿಯಾದರು. ಕಾರಿನಲ್ಲಿ ಆಗಾಗ ಯಾಂತ್ರಿಕ ಸಮಸ್ಯೆಗಳು ಕಂಡುಬರುತ್ತಿದ್ದವು. ಅದರ ಬೆಲೆಯೂ ಹೆಚ್ಚಾಗಿತ್ತು. ಆದ್ದರಿಂದ ಶ್ರೀಮಂತರು ಮಾತ್ರ ಇದನ್ನು ಖರೀದಿಸಲು ಸಾಧ್ಯವಾಗುತ್ತಿತ್ತು.

ಬಹುತೇಕ ಜನರು ಈ ಕಾರಿನಲ್ಲಿ ಪ್ರಯಾಣಿಸುವಾಗ ಜತೆಗೆ ಒಬ್ಬ ಮೆಕ್ಯಾನಿಕ್ ಅನ್ನು ಕರೆದುಕೊಂಡು ಹೋಗುತ್ತಿದ್ದರು ಎಂದರೆ ನಗಬೇಡಿ. ಕಾರು ರಸ್ತೆಯಲ್ಲಿ ಓಡಾಡಬೇಕು ಎಂದರೆ ಪೊಲೀಸರ ಪರವಾನಗಿ ಬೇಕಾಗಿತ್ತು ಎಂದರೆ ಆಶ್ಚರ್ಯ ಪಡಬೇಡಿ. ಆ ಕಾಲದಲ್ಲಿ ಹಾಗೆಯೇ ಇತ್ತು.

ಹೀಗಿರುವಾಗ, ಒಂದು ದಿನ ಬೆಳಗ್ಗೆ ಕಾರ್ಲ್ ಇನ್ನೂ ಹಾಸಿಗೆಯಲ್ಲಿರುವಾಗಲೇ ಅವರ ಮಡದಿ ಬೇಗನೆ ಎದ್ದು ತಮ್ಮ ಇಬ್ಬರು ಗಂಡು ಮಕ್ಕಳನ್ನು ಕರೆದುಕೊಂಡು 66 ಮೈಲು ದೂರದಲ್ಲಿರುವ ತನ್ನ ತಾಯಿಯನ್ನು ಭೇಟಿ ಮಾಡಲು ಹೊರಟರು. ಅದರನು ವಿಶೇಷ ಎಂದು ಕೇಳಬೇಡಿ. ನನ್ನ ಪ್ರಕಾರ ಆಟೋಮೊಬೈಲ್ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಪ್ರಯಾಣ ಇದು.

ಏಕೆಂದರೆ ತಮ್ಮ ತವರುಮನೆಗೆ ಹೋಗಲು ಆಕೆ ಬಳಸಿದ್ದು ಕಾರ್ಲ್ ಬೆನ್ಜ್ ತಯಾರಿಸಿದ ಕಾರನ್ನು. ಆದರೆ ಅವರು ಈ ಕಾರಿನಲ್ಲಿ ಹೋಗುತ್ತಿದ್ದೇನೆ ಎಂಬ ವಿಷಯವನ್ನು ತಮ್ಮ ಪತಿಗಾಗಲಿ ಅಥವಾ ಪೊಲೀಸರಿಗಾಗಲಿ ತಿಳಿಸಿರಲಿಲ್ಲ. ಏಕೆಂದರೆ ಅವರು ಹಾಗೆ ಹೋಗಲು ತಮಗೆ ಬಿಡುವುದಿಲ್ಲ ಎಂದು ಆಕೆಗೆ ಚೆನ್ನಾಗಿ ತಿಳಿದಿತ್ತು. ಅಲ್ಲಿಯವರೆಗೆ ಯಾವುದೇ ಕಾರು ಅಥವಾ ಸಣ್ಣ ಮೋಟಾರು ವಾಹನ ಅಷ್ಟು ದೀರ್ಘ ಪ್ರಯಾಣವನ್ನು ಪ್ರಯತ್ನಿಸಿರಲಿಲ್ಲ.

ತಮ್ಮ ಗಂಡನ ಆವಿಷ್ಕಾರದ ಮಹತ್ವವನ್ನು ಸಾಬೀತುಪಡಿಸಲು ಆಕೆ ದೃಢವಾಗಿ ನಿಶ್ಚಯಿಸಿದ್ದರು. ಕುದುರೆ ಗಾಡಿಗಳಿಗಾಗಿ ನಿರ್ಮಿಸಲಾದ ರಸ್ತೆಯಲ್ಲಿ ಧೂಳು, ಕಲ್ಲು ಇತ್ಯಾದಿಗಳು ತುಂಬಿಕೊಂಡಿದ್ದು, ವಾಹನ ಚಲಿಸಲು ಯೋಗ್ಯವಾಗಿರಲಿಲ್ಲ. ಆಗಾಗ ಯಾಂತ್ರಿಕ ತೊಂದರೆಗಳು ಎದುರಾಗುತ್ತಿದ್ದವು.

ಬರ್ತಾ ಆಗಾಗ ಅದನ್ನು ದುರಸ್ತಿ ಮಾಡಿಕೊಂಡು ಮುಂದುವರಿಬೇಕಾಯಿತು. 66 ಮೈಲಿಯ ಪ್ರಯಾಣ ಬರ್ತಾ ಮತ್ತು ಮಕ್ಕಳಿಗೆ ಹನ್ನೆರಡು ಗಂಟೆಗಳಿಗಿಂತ ಹೆಚ್ಚು ಸಮಯವನ್ನು ತೆಗೆದುಕೊಂಡಿತ್ತು. ಆದರೆ ಅಂತಿಮವಾಗಿ ಅವರು ತಮ್ಮ ತವರುಮನೆ ಸೇರಲು ಯಶಸ್ವಿಯಾದರು.

ಪ್ರಯಾಣದಲ್ಲಿ ಎಷ್ಟೇ ಕಷ್ಟವಾದರೂ ಎಲ್ಲರೂ ತಮ್ಮ ಪ್ರಯಾಣದ ಗುರಿ ತಲುಪಿದ ಸಂತೋಷದಲ್ಲಿದ್ದರು. ಅಷ್ಟು ದೂರದ ಪ್ರಯಾಣ ಎಲ್ಲರಲ್ಲೂ ಅಚ್ಚರಿಯನ್ನು ಮೂಡಿಸಿತು. ಅದರ ನಂತರವೂ ಮರ್ಸಿಡಿಸ್ ಸಂಸ್ಥೆಯಲ್ಲಿ ಸಾಕಷ್ಟು ಆವಿಷ್ಕಾರಗಳು ನಡೆದವು.

ಕಾರ್ಲ್‌ಗೆ ಕಷ್ಟಗಳನ್ನು ಎದುರಿಸುವ ಪ್ರಸಂಗವೂ ಒದಗಿ ಬಂತು. ಅಂದಿನ ಮರ್ಸಿಡಿಸ್ ಆವಿಷ್ಕಾರದ, ಸ್ಥಾಪನೆಯ, ಪ್ರಯಾಣದ ಹಾದಿ ಇಂದಿನ ಮರ್ಸಿಡಿಸ್ ಕಾರಿನೊಳಗೆ ಕುಳಿತು ಪ್ರಯಾಣಿಸುವಷ್ಟು ಸುಖವಾಗಂತೂ ಇರಲಿಲ್ಲ. ಸಾಕಷ್ಟು ಎಡರು-ತೊಡರುಗಳನ್ನು ಎದುರಿಸಿ, ಅಂದು ಕಾರ್ಲ್ ಬೆನ್ಜ್ ಕಷ್ಟಪಟ್ಟು ನಿರ್ಮಿಸಿದ ಮರ್ಸಿಡಿಸ್ ಕಾರು ಇಂದು ಕಾರುಗಳ ಲೋಕದಲ್ಲಿ ವಿಶೇಷವಾದ ಸ್ಥಾನ ಪಡೆದಿದೆ. ಎಲ್ಲದರ ನಡುವೆ, ಅಂದು ಬರ್ತಾ ತೆಗೆದುಕೊಂಡ ಧೈರ್ಯ ಮತ್ತು ಆಕೆಯ ಪ್ರವಾಸ, ಜಗತ್ತೇ ಆಟೋಮೊಬೈಲ್ ಉದ್ಯಮದ ಕಡೆ ತಿರುಗಿ ನೋಡುವಂತೆ ಮಾಡಿತು ಎನ್ನುವುದನ್ನು ಮಾತ್ರ ಮರೆಯುವಂತಿಲ್ಲ.

- ಕಿರಣ್ ಉಪಾಧ್ಯಾಯ, ಬಹ್ರೈನ್

ರೈತರಿಗೆ ವಿದ್ಯುತ್ ಸಮಸ್ಯೆಯಾಗದಂತೆ ಗಮನಹರಿಸಿ

ಅಂತರ್ಜಲ ಚೇತರಿಕೆ | ವಿದ್ಯುತ್ ಅಭಾವ ಎದುರಾದರೆ ಬೆಳೆಗಳಿಗೆ ತೊಂದರೆ | ಅಧಿಕಾರಿಗಳಿಗೆ ಶಾಸಕ ಸಿ.ಎನ್.ಬಾಲಕೃಷ್ಣ ಸೂಚನೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಬೇಸಿಗೆ ಅವಧಿ ಮುಗಿಯುವವರೆಗೂ ತಾಲ್ಲೂಕು ವ್ಯಾಪ್ತಿಯಲ್ಲಿ ವಿದ್ಯುತ್ ಸಮಸ್ಯೆಯಾಗದಂತೆ ಗಮನಹರಿಸಬೇಕು ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಚೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಚೆಸ್ಕಾಂ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿ, ತ್ರಿ ಫೇಸ್ ಲೈನ್ ಇದ್ದಾಗ ಎಲ್ಲಿ ತೆಗೆದುಕೊಳ್ಳಬೇಡಿ ಎಂದ ಅವರು, ಕಳೆದ 3 ವರ್ಷಗಳಿಂದ ತಾಲ್ಲೂಕು ವ್ಯಾಪ್ತಿಯ ಬಹುತೇಕ ಕೆರೆ-ಕಟ್ಟೆಗಳಿಗೆ ಏತ ನೀರಾವರಿ ಯೋಜನೆಯಡಿ ನೀರು ತುಂಬಿಸುತ್ತಿರುವ ಪರಿಣಾಮ ವ್ಯಾಪ್ತಿಯಲ್ಲಿ ಅಂತರ್ಜಲ ಚೇತರಿಕೆ ಕಂಡಿದೆ. ಇದರಿಂದ ಕೊಳವೆ ಬಾವಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಲಭ್ಯವಾಗುತ್ತಿದ್ದು ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ ಎಂದರು.

ಬೇಸಿಗೆ ಬಿಸಿಲಿನ ತಾಪಮಾನ ಏರಿಕೆಯಾಗಿರುವುದರಿಂದ ಬೆಳೆಗಳಿಗೆ ಸಮಯಕ್ಕೆ ಸರಿಯಾಗಿ ನೀರು ನೀಡುವುದು ಅಗತ್ಯವಿರುತ್ತದೆ. ವಿದ್ಯುತ್ ಅಭಾವ ಎದುರಾದರೆ ಬೆಳೆಗಳಿಗೆ ತೊಂದರೆಯಾಗಲಿದೆ ಎಂದು ಅವರು ತಿಳಿಸಿದರು.

ತಾಲ್ಲೂಕಿನ ಶೇ.40 ರಷ್ಟು ಪ್ರದೇಶದಲ್ಲಿ ವಿದ್ಯುತ್ ಸಮಸ್ಯೆ ಇದೆ. ದಯವಿಟ್ಟು ಅವುಗಳನ್ನು ಬಗೆಹರಿಸುವಂತಹ ಗಮನ ಹರಿಸಬೇಕು. ರೈತರ ಬೆಳೆಗಳಿಗೆ, ಜನ-ಜಾನುವಾರುಗಳ ಕುಡಿಯುವ ನೀರಿಗೆ ಹಾಗೂ ಮಕ್ಕಳ ಓದಿನ ಸಲುವಾಗಿ ಅಗತ್ಯವಾಗಿ ವಿದ್ಯುತ್ ಪೂರೈಕೆ ಮಾಡಬೇಕು. ಯಾವುದೇ ಸಮಸ್ಯೆಗಳು ಕಂಡು ಬಂದರು ತಕ್ಷಣ ಸರಿಪಡಿಸಿ ವಿದ್ಯುತ್ ಪೂರೈಕೆ ಮಾಡಬೇಕು ಎಂದರು.

ಜಿಲ್ಲೆಯಲ್ಲಿಯೇ ಚನ್ನರಾಯಪಟ್ಟಣ ತಾಲೂಕು ಹೆಚ್ಚು ಕೊಳವೆ ಬಾವಿಗಳನ್ನು ಹೊಂದಿದೆ. ವಿದ್ಯುತ್ ಪರಿವರ್ತಕಗಳು (ಟಿಸಿ) ಸುಟ್ಟರೆ ಸಾಧ್ಯವಾದಷ್ಟು ಬೇಗ ಒದಗಿಸಬೇಕು. ವಿದ್ಯುತ್ ಪರಿವರ್ತಕದ ಸಲುವಾಗಿ ರೈತರನ್ನು ಅಲೆದಾಡಿಸಬೇಡಿ. ರೈತರೊಂದಿಗೆ ಗೌರವದಿಂದ ವರ್ತಿಸಿ ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರಲ್ಲದೆ, ಬಹುತೇಕ ರೈತರು ಹೈನುಗಾರಿಕೆಯನ್ನು ಅಳವಡಿಸಿ ಕೊಂಡಿದ್ದು ಹಾಲು ಕರೆಯಲು ಮೆಷಿನ್ ಉಪಯೋಗಿಸುತ್ತಿದ್ದಾರೆ. ಹೈನುಗಾರಿಕೆಯಲ್ಲಿ ಬೆಳಗ್ಗೆ ಹಾಗೂ ಸಂಜೆ ವೇಳೆ ವಿದ್ಯುತ್ ಅಗತ್ಯವಿದ್ದು ಸಮಸ್ಯೆ ಆಗದಂತೆ ಗಮನ ಹರಿಸಬೇಕು ಎಂದರು.

ಭೈರಾಪುರ, ಸಾತೇನಹಳ್ಳಿ ಹಾಗೂ ಹಾರೋ ಸೋಮನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ರೈತರು ತಮ್ಮ ತಮ್ಮ ವ್ಯಾಪ್ತಿಯ ವಿದ್ಯುತ್ ಸಮಸ್ಯೆಗಳನ್ನು ಕುರಿತು ಶಾಸಕರಿಗೆ ಹಲವು ದೂರುಗಳನ್ನು ನೀಡಿದರು.

ಭೈರಾಪುರ ಗ್ರಾಮದ ರೈತ ಕೃಷ್ಣೇಗೌಡ ಮಾತನಾಡಿ, ಸಂಜೆ 6 ಗಂಟೆಯಿಂದ ಬೆಳಗಿನ ಜಾವದ ವರೆಗೂ ಅಗತ್ಯವಾಗಿ ವಿದ್ಯುತ್ ಪೂರೈಕೆ ಮಾಡಬೇಕು. ಸಂಜೆ ಸುಮಾರಿನಿಂದಲೇ ಗ್ರಾಮೀಣ ಪ್ರದೇಶದಲ್ಲಿ ಚಿರತೆಗಳ ಕಾಟ ಪ್ರಾರಂಭವಾಗಲಿದೆ. ದಯವಿಟ್ಟು ರಾತ್ರಿಯಿಡಿ ವಿದ್ಯುತ್ ಪೂರೈಕೆ ಮಾಡುವುದು ಸೂಕ್ತ ಎಂದು ತಮ್ಮ ಅಳಲನ್ನು ತೋಡಿಕೊಂಡರು.

ಕಾರ್ಯ ನಿರ್ವಾಹಕ ಇಂಜಿನಿಯರ್ ಆರ್.ರತ್ನ ಅವರು ಮಾತನಾಡಿ, ಈಗಾಗಲೇ ಅರ್ಜಿ ನೀಡಿರುವ ರೈತರಿಗೆ ಎಸ್ಟಿಮೇಶನ್ ಸಿದ್ಧಪಡಿಸಿ ವಿದ್ಯುತ್ ಪರಿವರ್ತಕಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸುವ ಕೆಲಸ ಮಾಡಲಾಗುತ್ತಿದೆ. ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರು ಹಾಗೂ ಮಕ್ಕಳ ಶೈಕ್ಷಣಿಕ ವ್ಯವಸ್ಥೆಯ ಸಲುವಾಗಿ ವಿದ್ಯುತ್ ತೊಂದರೆಯಾಗದಂತೆ ವ್ಯಾಪ್ತಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಪಿಎಂಸಿ ಮಾಜಿ ಅಧ್ಯಕ್ಷ ದೊರೆಸ್ವಾಮಿ, ಪ್ರಮುಖರಾದ ಬಸವರಾಜ್, ಎಇ ಎನ್.ಆರ್.ಹರೀಶ್, ಎಇಇ ಗಳಾದ ವಜ್ರಕುಮಾರ್, ಕೃಷ್ಣ, ವಿಶಾಲ, ಶಾಖಾಧಿಕಾರಿಗಳು, ಸಿಬ್ಬಂದಿ ವರ್ಗ ಹಾಗೂ ತಾಲ್ಲೂಕು ವ್ಯಾಪ್ತಿಯ ರೈತರು ಹಾಜರಿದ್ದರು.

ಸ್ಕೌಟ್ಸ್- ಗೈಡ್ಸ್ ಸಂಸ್ಥಾಪಕರ ಜನ್ಮ ದಿನಾಚರಣೆ

• ಪ್ರಜೋದಯ ವರದಿ

ಹಾಸನ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ ಸ್ಥಳೀಯ ಸಂಸ್ಥೆ ಹಾಗು ಪೋದಾರ್ ಇಂಟರ್ನ್ಯಾಷನಲ್ ಶಾಲೆ ವತಿಯಿಂದ ಭಾರತ್ ಸ್ಕೌಟ್ಸ್ ಮತ್ತು ಗೈಡ್ ಸಂಸ್ಥಾಪಕ ಲಾರ್ಡ್ ಬೆಡನ್ ಪೊವೆಲ್ ಅವರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಮುಖ್ಯ ಆಯುಕ್ತ ಡಾ. ವೈ.ಎಸ್. ವೀರಭದ್ರಪ್ಪ ಅವರು ಮಾತನಾಡಿ, ಸೇವೆ, ಕೌಶಲ ಹಾಗೂ ವ್ಯಕ್ತಿತ್ವ ಬೆಳವಣಿಗೆ ಮೂಲಕ ನಾವು ಬೆಳೆಯುತ್ತಾ ದೇಶದ ಬೆಳವಣಿಗೆಗೂ ಕೊಡುಗೆ ನೀಡಲು ನಾವು ಸದೃಢರಾಗಬೇಕು. ಇದು ಬೇಡನ್ ಪೊವೆಲ್ ಅವರ ಕನಸು ಎಂದರು. ತಾಲ್ಲೂಕು ಕಾರ್ಯದರ್ಶಿ ಬಿ.ಎಸ್.ವನಜಾಕ್ಷಿ ಅವರು ಮಾತನಾಡಿ, ಸ್ಕೌಟ್ಸ್ ಅಂಡ್ ಗೈಡ್ಸ್ ಶತಮಾನ ಪೂರೈಸಿ ಪ್ರಪಂಚದಾದ್ಯಂತ ತನ್ನದೇಯಾದ ನೆಲೆ ಕಟ್ಟಿಕೊಂಡಿದೆ. ಯುವಕರಲ್ಲಿ ಸದೃಢ ವ್ಯಕ್ತಿತ್ವ ರೂಪಿಸುವುದರೊಂದಿಗೆ ಮಾತೃ ಪ್ರೇಮ, ದೇಶ ಪ್ರೇಮ, ಪರಿಸರ ಪ್ರಜ್ಞೆ, ಸ್ವಚ್ಛತೆ ಅರಿವು ಹಾಗು ವ್ಯಕ್ತಿತ್ವ ನಿರ್ಮಾಣಕ್ಕೆ ಅಪಾರ ಕೊಡುಗೆ ನೀಡುತ್ತಿದೆ. ಇಲ್ಲಿ ಸದಸ್ಯರಾಗುವುದು ಸದಾವಕಾಶ. ಎಲ್ಲರೂ ಸಕ್ರಿಯವಾಗಿ ಪಾಲ್ಗೊಳ್ಳಬಹುದು ಎಂದರು.

ಏಕಲವ್ಯ ಓಪನ್ ಗ್ರುಪ್‌ನ ಆರ್. ಜಿ. ಗಿರೀಶ್, ಪೋದಾರ್ ಶಾಲೆಯ ಸ್ಕೌಟ್ಸ್ ಶಿಕ್ಷಕ ನೂತನ್, ಅಂಜನಾ ಮತ್ತಿತರರಿದ್ದರು.

ಸ್ಮಶಾನ ಜಾಗದಲ್ಲಿ ಗಣಿಗಾರಿಕೆಗೆ ಪರವಾನಗಿ: ಗ್ರಾಮಸ್ಥರ ವಿರೋಧ

• ಪ್ರಜೋದಯ ವರದಿ

ಅಂತರ ಕಾಯ್ದು ಕೊಳ್ಳದೆ ಗುತ್ತಿಗೆ ಮಂಜೂರು ಕಾನೂನು ಬಾಹಿರ

ಹಾಸನ: ಸ್ಮಶಾನ ಜಾಗದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಪರವಾನಗಿ ನೀಡಿದ್ದು ಕೂಡಲೇ ರದ್ದುಪಡಿಸಿ ಗ್ರಾಮಸ್ಥರಿಗೆ ಅನುಕೂಲ ಮಾಡಿ ಕೊಡಬೇಕೆಂದು ತಾಲ್ಲೂಕಿನ ಯರೇಬರೆ ಕಾವಲು ಗ್ರಾಮದ ಆನಂದ್ ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಸರ್ವೆ ನಂ.83ರ ಸ್ಮಶಾನ ಜಾಗದಲ್ಲಿ ಗಣಿ ಗಾರಿಕೆ ನಡೆಸಲು ಸಮ್ಮತಿ ದೊರೆತಿದೆ. ಸಾರ್ವಜನಿಕ ಆಸ್ತಿಯನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ. ಅದಕ್ಕೆ ಹೊಂದಿಕೊಂಡಂತೆ ಮನೆಗಳು ಇರುವುದರಿಂದ ಸಮಸ್ಯೆಯಾಗುತ್ತದೆ. ಒಟ್ಟು 5 ಎಕರೆ 20 ಗುಂಟೆ ಜಮೀನಿನಲ್ಲಿ 2 ಎಕರೆ ಜಾಗವನ್ನು ಸ್ಮಶಾನಕ್ಕಾಗಿ ಕಾಯ್ದಿರಿಸಲಾಗಿದೆ. ಕಾನೂನು ಪ್ರಕಾರ ಜನನಿಬಿಡ ಪ್ರದೇಶದಿಂದ 200 ಮೀಟರ್ ದೂರದಲ್ಲಿ ಗಣಿಗಾರಿಕೆ ನಡೆಸಬೇಕು. 100 ಮೀಟರ್ ಅಂತರದಲ್ಲೇ ಮನೆಗಳಿವೆ. ಸ್ಮಶಾನ ಮತ್ತು ರಸ್ತೆಯಿಂದ ಅಂತರ ಕಾಯ್ದುಕೊಳ್ಳದೆ ಗುತ್ತಿಗೆ ಮಂಜೂರು ಮಾಡಿರುವುದು ಕಾನೂನುಬಾಹಿರವೆಂದು ಆರೋಪಿಸಿದರು.

ಸ್ಮಶಾನಕ್ಕೆ ಹೊಂದಿಕೊಂಡಂತೆ ಸುಮಾರು 72 ಆಶ್ರಯ ಮನೆಗಳಿವೆ. ನಾವು ಕಂದಾಯ ಕಟ್ಟುತ್ತಿದ್ದರೂ, ಈವರೆಗೂ ಹಕ್ಕು ಪತ್ರ ನೀಡಿಲ್ಲವೆಂದು ಅಳಲು ತೋಡಿಕೊಂಡರು. ಕಲ್ಲು ಗಣಿಗಾರಿಕೆ ನಡೆಸಿದರೆ ಮನೆಗಳಿಗೆ ಮಾತ್ರವಲ್ಲದೆ, ಪರಿಸರಕ್ಕೆ ಹಾನಿಯಾಗಲಿದೆ. ಶಬ್ದ ಮಾಲಿನ್ಯ ಹಾಗು ಸಾರ್ವಜನಿಕರ ಭಾವನೆಗಳಿಗೆ ಧಕ್ಕೆಯಾಗಲಿದೆ. ಈ ಸಂಬಂಧ ಕಳೆದ 10 ತಿಂಗಳಿಂದ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಸೇರಿ ಎಲ್ಲಾ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಸ್ಥಳೀಯ ಶಾಸಕರು ಹಾಗು ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಪರಿಶೀಲನೆ ನಡೆಸಿ ನ್ಯಾಯ ಒದಗಿಸಬೇಕು. ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಬೇಕೆಂದು ಇದೇ ಸಂದರ್ಭದಲ್ಲಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಮಸ್ಥರಾದ ಚಂದ್ರೇಗೌಡ, ತಿಮ್ಮಯ್ಯ, ಆನಂದ್ ಡಿ.ಗೌಡ, ಚಂದ್ರೇಗೌಡ ಹಾಜರಿದ್ದರು.

ಮನರೇಗಾ ರದ್ದು ಅಶಕ್ತರ ಅನ್ನಕ್ಕೆ ಕುತ್ತು: ಸಿದ್ದರಾಮಯ್ಯ

• ಪ್ರಜೋದಯ ವರದಿ

ದೇಶದಾದ್ಯಂತ ವಿಬಿಜಿ ರಾಮ್ ಜಿ ರದ್ದುಗೊಳಿಸಲು ಅಭಿಯಾನ

ಬೆಂಗಳೂರು: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ) ಸ್ವರೂಪ ಬದಲಿಸುವ ಮೂಲಕ ಕೇಂದ್ರ ಸರ್ಕಾರ ಆದಿವಾಸಿಗಳು, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರು ಸೇರಿ ಅಶಕ್ತರ ಬದುಕುವ ಮತ್ತು ಉದ್ಯೋಗದ ಹಕ್ಕು ಕಿತ್ತುಕೊಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಗ್ದಾಳಿ ನಡೆಸಿದರು.

ಮನರೇಗಾ ಮರುಸ್ಥಾಪಿಸಬೇಕು, ವಿಬಿಜಿ ರಾಮ್ ಜಿ'ರದ್ದುಗೊಳಿಸಬೇಕೆಂದು ಆಗ್ರಹಿಸಿ ಕಾಂಗ್ರೆಸ್ ಚಿಕ್ಕಬಳ್ಳಾಪುರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ಮನರೇಗಾ ಬಚಾವ್ ಸಂಗ್ರಾಮ' ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿ, ದೇಶದಾದ್ಯಂತ ಮನರೇಗಾ ಉಳಿಸಿ ಅಭಿಯಾನ ಆರಂಭವಾಗಿದೆ. ಕಾಂಗ್ರೆಸ್‌ನ ಹೋರಾಟದ ಉದ್ದೇಶವನ್ನು ತಿಳಿದು ಜನರು ಕೈ ಜೋಡಿಸಬೇಕೆಂದು ಕೋರಿದರು.

ಕೂಲಿಕಾರರು, ಆದಿವಾಸಿಗಳು, ಸಣ್ಣ ರೈತರಿಗೆ, ಮಹಿಳೆಯರಿಗೆ ಉದ್ಯೋಗದ ಅನುಕೂಲ ಕಲ್ಪಿಸುವ ದಿಸೆಯಲ್ಲಿ 2005 ರಲ್ಲಿ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ, ನಾಯಕಿ ಸೋನಿಯಾ ಗಾಂಧಿ ಅವರ ನೇತೃತ್ವದಲ್ಲಿ ಈ ಕಾಯ್ದೆ ಜಾರಿಯಾಯಿತು. ಇದೇ ಕಾಯ್ದೆಯಲ್ಲದೇ, ಶಿಕ್ಷಣ, ಆಹಾರ, ಮಾಹಿತಿ ಹಕ್ಕು ಸೇರಿ ಹಲವು ಜನಪರ ಕಾಯ್ದೆಗಳನ್ನು ಜಾರಿಗೆ ತಂದಿದ್ದರು. ಆದರೆ ಈ ಎಲ್ಲಾ ಜನಪರ ಕಾಯ್ದೆಗಳನ್ನು ದುರ್ಬಲಗೊಳಿಸುವ ಕೆಲಸವನ್ನು ಮೋದಿ ನೇತೃತ್ವದ ಸರ್ಕಾರ ಮಾಡುತ್ತಿದೆ ಎಂದರು.

ಮನರೇಗಾ ಅಡಿ 12.16 ಕೋಟಿ ಜನರಿಗೆ ಉದ್ಯೋಗ:

ಸದನದಲ್ಲಿ ಕೇವಲ 8 ಗಂಟೆಗಳ ಕಾಲ ಚರ್ಚೆ ಮಾಡಿದ ಕೇಂದ್ರ ಸರ್ಕಾರ, ನಂತರ ಹೊಸ ಕಾಯ್ದೆಯನ್ನು ಜಾರಿಗೆ ತಂದರು. ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಜೀವಿಕ ಮಿಷನ್ ಗ್ರಾಮೀಣ ಕಾಯ್ದೆ, 12.16 ಕೋಟಿ ಜನರು ಕೆಲಸ ಪಡೆಯು ತ್ತಿದ್ದರು. ಇದರಲ್ಲಿ ಶೇ.53 ರಷ್ಟು ಉದ್ಯೋಗ ಪಡೆಯುತ್ತಿದ್ದರು. ಅಲ್ಲದೇ ಪರಿಶಿಷ್ಟ ಜಾತಿಯ ಶೇ.17 ಮತ್ತು ಪರಿಶಿಷ್ಟ ವರ್ಗದ ಶೇ.11 ಜನರು ಉದ್ಯೋಗ ಪಡೆಯುತ್ತಿದ್ದರು. ಈ ಎಲ್ಲಾ ಜನರ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ ಎಂದು ದೂರಿದರು.

ಸೋಲು- ಗೆಲುವಿಗಿಂತ ಕ್ರೀಡೆಯನ್ನು ಆನಂದಿಸುವುದು ಮುಖ್ಯ

• ಪ್ರಜೋದಯ ವರದಿ

ಸಕಲೇಶಪುರ: ಆಟದಲ್ಲಿ ಸೋಲು ಗೆಲುವು ಮುಖ್ಯವಲ್ಲ, ಕ್ರೀಡೆಯನ್ನು ಆನಂದಿಸುವುದು ಮುಖ್ಯ ಎಂದು ಕಾರ್ಯಪಾಲಕ ಅಭಿಯಂತರ ಪ್ರಸನ್ನ ಹೇಳಿದರು.

ಪಟ್ಟಣದ ಸುಭಾಷ್ ಮೈದಾನದಲ್ಲಿ ಭಾನುವಾರ ಸೆಸ್ಕ್ ಮತ್ತು ಕೆ.ಪಿ.ಟಿ.ಸಿ.ಎಲ್. ನೌಕರರಿಗಾಗಿ ಆಯೋಜಿಸಲಾಗಿದ್ದ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಿದ ನಂತರ ಮಾತನಾಡಿದ ಅವರು, ಒತ್ತಡದ ಬದುಕಿನಲ್ಲಿ ಇಂತಹ ಕ್ರೀಡಾಕೂಟಗಳು ನಮ್ಮ ನೌಕರರಿಗೆ ಮುಖ್ಯವಾಗಿದೆ. ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಮನಸ್ಸಿಗೆ ನೆಮ್ಮದಿ ದೊರಕುತ್ತದೆ ಎಂದರು.

ತಾಲ್ಲೂಕು ಗುತ್ತಿಗೆದಾರರ ಸಂಘದ ಅಧ್ಯಕ್ಷ ಪ್ರೇಮ್‌ನಾಥ್ ಅವರು ಮಾತನಾಡಿ, ಸೆಸ್ಕ್, ಕೆ.ಪಿ.ಟಿ.ಸಿ.ಎಲ್. ಸಿಬ್ಬಂದಿಗಳ ಜೊತೆ ಗುತ್ತಿಗೆದಾರರು ಸಹ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದಾರೆ. ಇಂತಹ ಒಗ್ಗಟ್ಟು ನಮ್ಮ ತಾಲ್ಲೂಕಿನಲ್ಲಿ ಮಾತ್ರ ಕಾಣಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಸಕಲೇಶಪುರ ಸೆಸ್ಕ್ ಉಪ ವಿಭಾಗದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಒಟ್ಟು 7 ತಂಡಗಳು ಭಾಗವಹಿಸಿದ್ದು, ಕೆ.ಪಿ.ಟಿ.ಸಿ.ಎಲ್. ಹಾಗೂ ಯಸಳೂರು ತಂಡಗಳ ನಡುವೆ ಸೆಮಿಫೈನಲ್ ಪಂದ್ಯಾವಳಿ ನಡೆದು ಯಸಳೂರು ತಂಡ ಫೈನಲ್‌ಗೆ ಪ್ರವೇಶಿಸಿದ್ದು, ಸಕಲೇಶಪುರ ಟೌನ್ ಹಾಗೂ ಹಾನುಬಾಳ್ ಸೆಸ್ಕ್ ತಂಡಗಳ ನಡುವೆ ಮತ್ತೊಂದು ಸೆಮಿಫೈನಲ್ ಪಂದ್ಯ ನಡೆದು ಹಾನುಬಾಳ್ ತಂಡ ಫೈನಲ್‌ಗೆ ಪ್ರವೇಶ ಮಾಡಿತ್ತು. ಹಾನುಬಾಳ್ ಹಾಗೂ ಯಸಳೂರು ತಂಡಗಳ ನಡುವೆ ಅಂತಿಮ ಹಣಾಹಣಿ ನಡೆದು ಹಾನುಬಾಳ್ ತಂಡ 4 ಓವರ್‌ಗಳಿಗೆ 24 ರನ್ ಗಳಿಸಿದ್ದು ಇದನ್ನು ಯಸಳೂರು ತಂಡ ಸುಲಭವಾಗಿ ಬೆನ್ನಟ್ಟಿ ವಿಜಯಶೀಲವಾಯಿತು.

ಈ ಸಂದರ್ಭದಲ್ಲಿ ಬೆಂಗಳೂರಿನ ಅಭಿಯಂತರ ಚಲಪತಿ ರೆಡ್ಡಿ, ಸಕಲೇಶಪುರ ಎ.ಇ.ನಿರಂಜನ್, ಅಶ್ರಫ್, ಯಸಳೂರು ವಿಭಾಗದ ಎ.ಇ. ಅಮಿತ್, ನೌಕರರ ಕೇಂದ್ರ ಸಮಿತಿಯ ಸದಸ್ಯರಾದ ರಾಮಣ್ಣ, ನವಾಬ್ ಖಾನ್ ಸೆಸ್ಕ್ ಅಧಿಕಾರಿಗಳಾದ ಅಭಿಶರ್ಮ, ಪ್ರಕಾಶ್, ಪರಮೇಶ್ ಮಂಜುನಾಥ್, ರಂಗನಾಥ್ ಸೋಮಶೇಖರ್, ಚಂದ್ರು, ರಾಘವೇಂದ್ರ ಸೇರಿದಂತೆ ಇತರರು ಹಾಜರಿದ್ದರು.

ಮುಂದಿನ 3 ದಿನ ರಾಜ್ಯದಲ್ಲಿ ಮಳೆ ಮುನ್ಸೂಚನೆ

• ಪ್ರಜೋದಯ ವರದಿ

ನವದೆಹಲಿ: ಬಂಗಾಳಕೊಲ್ಲಿಯ ನೈಋತ್ಯ ಮತ್ತು ಪಕ್ಕದ ಪ್ರದೇಶಗಳಲ್ಲಿ ಕಡಿಮೆ ಒತ್ತಡ ಪ್ರದೇಶವು ರೂಪುಗೊಂಡಿದೆ. ನೆರೆಯ ಕೇರಳ, ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಧಾರಾಕಾರ ಮಳೆ ಆಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಕರ್ನಾಟಕದಲ್ಲೂ ಮಳೆ ಆಗುವ ಸಾಧ್ಯತೆ ಇದೆ. ಮುಂದಿನ ಮೂರು ದಿನಗಳ ಅವಧಿಗೆ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಯಾವ ರೀತಿಯ ಹವಾಮಾನ ಇರಲಿದೆ. ಫೆಬ್ರವರಿ ತಿಂಗಳು ಮುಕ್ತಾಯವಾಗುತ್ತಿರುವಾಗಲೇ ದೇಶದಾದ್ಯಂತ ಹವಾಮಾನದಲ್ಲಿ ಮಹತ್ವದ ಬದಲಾವಣೆ ಆಗುತ್ತಿದೆ. ಉತ್ತರ ಭಾರತ ಹಾಗೂ ಮಧ್ಯಭಾರತದ ವಿವಿಧ ಭಾಗದಲ್ಲಿ ಬೇಸಿಗೆ ಪ್ರಾರಂಭವಾಗುತ್ತಿದೆ. ಇದೇ ಸಂದರ್ಭದಲ್ಲಿ ಹವಾಮಾನದಲ್ಲಿನ ಬದಲಾವಣೆಗಳಿಂದ ದಕ್ಷಿಣ ಭಾರತದ ವಿವಿಧ ರಾಜ್ಯಗಳಲ್ಲಿ ಮಳೆ ಆರ್ಭಟ ಇರಲಿದೆ ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಇನ್ನು ದಕ್ಷಿಣ ಭಾರತದ ವಿವಿಧ ರಾಜ್ಯಗಳಲ್ಲಿ ಮಳೆ ಆಗುವ ಮುನ್ಸೂಚನೆ ಇದೆ. ಈ ರಾಜ್ಯಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇನ್ನು ದಕ್ಷಿಣ ಭಾರತದ ವಿವಿಧ ರಾಜ್ಯಗಳಲ್ಲಿ ಭಾರೀ ಮಳೆ ಆಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ತಮಿಳುನಾಡು ಮತ್ತು ಕೇರಳದ ಪ್ರತ್ಯೇಕ ಸ್ಥಳಗಳಲ್ಲಿ ಭಾರೀ ಮಳೆಯಾಗುವ ನಿರೀಕ್ಷೆಯಿದೆ. ಫೆಬ್ರವರಿ 23-26 ರವರೆಗೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಚದುರಿದಂತೆ ಸಾಕಷ್ಟು ವ್ಯಾಪಕವಾದ ಹಗುರದಿಂದ ಕೂಡಿದ ಮಳೆಯಾಗುವ ಸಾಧ್ಯತೆ ಇದೆ.

ಅಲ್ಲದೆ ಮಿಂಚು - ಗುಡುಗು ಸಹಿತ ಗಂಟೆಗೆ 30-40 ರಿಂದ ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ತೆಲಂಗಾಣದಲ್ಲಿಯೂ ಇದೇ ರೀತಿಯ ಹವಾಮಾನ ಪರಿಸ್ಥಿತಿ ಕಂಡು ಬರುವ ಸಾಧ್ಯತೆಯಿದೆ. ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲೂ ಸಾಧಾರಣ ಮಳೆ ಆಗುವ ಸಾಧ್ಯತೆ ಇದೆ ಎಂದು ವರದಿ ಉಲ್ಲೇಖಿಸಿದೆ.

ಮಾರಮ್ಮ ದೇವಿಯ ವೈಭವದ ಉತ್ಸವ

• ಪ್ರಜೋದಯ ವರದಿ



ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಹೋಬಳಿ ತೋಟಿ ಕೊಪ್ಪಲು ಗ್ರಾಮದಲ್ಲಿ ಶ್ರೀ ಮಾರಮ್ಮ ದೇವಿಯ ಹಬ್ಬ ಭಾನುವಾರ ರಾತ್ರಿ ವೈಭವದಿಂದ ನಡೆಯಿತು. ಈ ಹಿನ್ನಲೆಯಲ್ಲಿ ಮುಂಜಾನೆಯೇ ದೇವಿಯ ದೇವಾಲಯಕ್ಕೆ ಹಸಿರು ಚಪ್ಪರ ಹಾಕಲಾಗಿದ್ದು ತಳಿರು ತೋರಣ ಗಳಿಂದ ಸಿಂಗರಿಸಲಾಗಿತ್ತು. ವಿದ್ಯುತ್ ದೀಪಲಂಕಾರ ಮಾಡಲಾಗಿದ್ದು ಉತ್ಸವದ ಬೀದಿಯನ್ನು ಸ್ವಚ್ಛಗೊಳಿಸಿ ರಂಗೋಲಿ ಬಿಡಿಸಲಾಗಿತ್ತು.

ದೇವಿಗೆ ಒಡವೆ ವಸ್ತ್ರಗಳಿಂದ ಅಲಂಕರಿಸಲಾಯಿತು. ಮುಂಜಾನೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು ಆರಂಭಗೊಂಡಿದ್ದು, ದೇವಿಗೆ ಅಭಿಷೇಕ ಜರುಗಿತು. ಭಕ್ತರು ಹಣ್ಣು ಕಾಯಿ ಅರ್ಪಿಸಿ ಗಂಧ-ಕರ್ಪೂರ ಬೆಳಗಿಸಿದರು. ದೇವಿಯ ದರ್ಶನ ಪಡೆದು ಪುನೀತರಾದರು.

ಸಂಜೆ ಸುಮಾರಿನಲ್ಲಿ ಮಂಗಳ ವಾದ್ಯದೊಂದಿಗೆ ಸಾಗಿದ ಮೆರವಣಿಗೆಯಲ್ಲಿ ಹೆಣ್ಣು ಮಕ್ಕಳು ತಂಬಿಟ್ಟಿನ ಆರತಿ ಹಿಡಿದು ದೇವಾಲಯಕ್ಕೆ ಆಗಮಿಸಿದರು. ದೇವಿಗೆ ವಿಶೇಷ ಪೂಜಾ ವಿಧಿ ವಿಧಾನಗಳು ನೆರವೇರಿದವು. ಹೆಣ್ಣು ಮಕ್ಕಳು ದೇವಿಗೆ ತಂಬಿಟ್ಟಿನ ಆರತಿ ಬೆಳಗಿಸಿದರು.

250 ವರ್ಷಗಳ ಇತಿಹಾಸ: ಗ್ರಾಮದ ಶ್ರೀ ಮಾರಮ್ಮ ದೇವಿ ದೇವಸ್ಥಾನಕ್ಕೆ ಸುಮಾರು 250 ವರ್ಷಗಳಿಗೂ ಮೀರಿದ ಇತಿಹಾಸವಿದೆ. ಪೂರ್ವ ಕಾಲದಲ್ಲಿ ಊರಿನಲ್ಲಿ ಪ್ಲೇಗ್, ಕಾಲರ ಹಾಗೂ ಇತರೆ ಸಾಂಕ್ರಾಮಿಕ ರೋಗಿಗಳು ತಲೆದೋರುತ್ತಿದ್ದು ಸಾವು-ನೋವುಗಳು ಹೆಚ್ಚಾಗಿ ಸಂಭವಿಸುತ್ತಿದ್ದವು. ಜೊತೆಗೆ ಮಕ್ಕಳಲ್ಲಿ ದಡಾರ, ಸಿಡುಬು, ಆಮಶಂಕೆ, ಕಾಮಾಲೆ ಸೇರಿ ವಿವಿಧ ಅಪಾಯಕಾರಿ ಕಾಯಿಲೆಗಳು ಕಾಣಿಸಿಕೊಳ್ಳುತ್ತಿದ್ದು, ಊರಿನ ಜನ ಶ್ರೀ ಮಾರಮ್ಮ ದೇವಿಗೆ ಮೊರೆ ಹೋದ ನಂತರ ಸಮಸ್ಯೆ ಪರಿಹಾರಗೊಂಡು ಗ್ರಾಮದಲ್ಲಿ ನೆಮ್ಮದಿ ನೆಲೆಸುತ್ತದೆ. ಅಂದು ಪೂರ್ವಜರು ಕಲ್ಲನ್ನು ನೆಟ್ಟು ಪೂಜಿಸಲಾರಂಭಿಸಿದ್ದು ವಿವಿಧ ಕಾಲಘಟ್ಟಗಳಲ್ಲಿ ಹಂತ ಹಂತವಾಗಿ ದೇವಾಲಯ ನಿರ್ಮಾಣಗೊಳಿಸಿ ಅಭಿವೃದ್ಧಿ ಮಾಡಲಾಗಿದೆ. ಇಂದಿಗೂ ಅದೇ ಭಯ ಭಕ್ತಿಯಿಂದ ಹಬ್ಬ ಆಚರಿಸುವುದು ವಿಶೇಷವಾಗಿದೆ.

ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಸ್ಕೌಟ್ಸ್- ಗೈಡ್ಸ್ ಸಹಕಾರಿ

• ಪ್ರಜೋದಯ ವರದಿ

ಆಲೂರು: ಲಾರ್ಡ್ ಬೆಡನ್ ಪೊವೆಲ್ ಜನ್ಮ ದಿನಾಚರಣೆಯನ್ನು ಸಂಸ್ಥಾಪನಾ ದಿನವನ್ನಾಗಿ ಆಚರಿಸುವುದರೊಂದಿಗೆ, ಈ ದಿನ ಜಾಥ ಅಥವಾ ರ್‍ಯಾಲಿಗಳನ್ನು ಹಮ್ಮಿಕೊಂಡು ಘೋಷಣಾ ವಾಕ್ಯಗಳನ್ನು ಕೂಗಲಾಗುತ್ತದೆ. ರ್‍ಯಾಲಿಗಳು ಮಕ್ಕಳಲ್ಲಿ ಸೃಜನಶೀಲತೆಯನ್ನು ಹೆಚ್ಚಿಸುತ್ತವೆ. ಭಾರತ್ ಸ್ಕೌಟ್ಸ್ ಗೈಡ್ಸ್ ಮಕ್ಕಳಲ್ಲಿ ಜೀವನ ಕೌಶಲಗಳನ್ನು ಬೆಳೆಸುವುದರೊಂದಿಗೆ ಸರ್ವಾಂಗೀಣ ವಿಕಸನಗೊಳಿಸುತ್ತದೆ ಎಂದು ಜಿಲ್ಲಾ ಕಾರ್ಯದರ್ಶಿ ಸುರೇಶ್ ಗುರೂಜಿ ಹೇಳಿದರು.

ತಾಲ್ಲೂಕು ಭಾರತ್ ಸ್ಕೌಟ್ಸ್ ಗೈಡ್ಸ್ ಸ್ಥಳೀಯ ಸಂಸ್ಥೆ ವತಿಯಿಂದ ಬೈರಾಪುರ ಎಸ್.ವಿ. ಪಬ್ಲಿಕ್ ಶಾಲೆಯಿಂದ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ರ್‍ಯಾಲಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಲಾರ್ಡ್ ಬೆಡನ್ ಪೊವೆಲ್ ಹಾಗೂ ಲೇಡಿ ಬೆಡನ್ ಪೊವೆಲ್ ಅವರೀರ್ವರೂ ಹುಟ್ಟಿದ್ದು ಫೆಬ್ರವರಿ 22.ಆದ್ದರಿಂದ 175 ಕ್ಕೂ ಹೆಚ್ಚು ರಾಷ್ಟಗಳಲ್ಲಿ ಈ ದಿನವನ್ನು ಸ್ಕೌಟ್ಸ್ ಗೈಡ್ಸ್ ಸಂಸ್ಥಾಪನಾ ದಿನವನ್ನಾಗಿ ಆಚರಿಸಲಾಗುತ್ತದೆ. ಈ ಮುಖೇನ ಅವರೀರ್ವರ ಜೀವನ ಸಾಧನೆಗಳನ್ನು ವಿವರಿಸಲಾಗುತ್ತದೆ ಎಂದರು.

ರ್‍ಯಾಲಿಗಳನ್ನು ಹಮ್ಮಿಕೊಳ್ಳುವ ಮೂಲಕ ಸಂಸ್ಥೆಯ ಗುರಿ ಉದ್ದೇಶಗಳನ್ನು ಮೆಲಕು ಹಾಕುವ ಕಾರ್ಯಕ್ರಮ ಇದಾಗಿದೆ. ಸಮಯಪಾಲನೆ, ಶಿಸ್ತು, ಸೇವಾ ಮನೋಭಾವನೆ, ಭ್ರಾತೃತ್ವ ಭಾವನೆ ಮುಂತಾದ ಮಹತ್ತರ ಅಂಶಗಳನ್ನು ಈ ಚಳುವಳಿಯಲ್ಲಿ ಕಲಿಸಲಾಗುತ್ತದೆ. ನೆರೆಮನೆ, ನೆರೆಯೂರು, ನೆರೆರಾಜ್ಯ, ನೆರೆ ರಾಷ್ಟಗಳೊಂದಿಗೆ ಉತ್ತಮ ಬಾಂಧವ್ಯ ಬೆಸೆಯುವ ಮನೋಧೋರಣೆ ಬೆಳೆಸುವುದರೊಂದಿಗೆ ವಿಶ್ವಮಾನವ ಸಂದೇಶ ಸಾರುತ್ತಾ ಧರ್ಮಾತೀತವಾಗಿ, ವರ್ಣಾತೀತವಾಗಿ, ಲಿಂಗಾತೀತವಾಗಿ ಸಮಾನತೆಯಿಂದ ಬದುಕು ಸಾಗಿಸುವುದನ್ನು ಕಲಿಸುತ್ತಾ ಸರಳವಾದ ಜೀವನಕ್ರಮವನ್ನು ಇಲ್ಲಿ ಕಲಿಯುತ್ತೇವೆ ಎಂದರು.

ಎಸ್.ವಿ.ಪಬ್ಲಿಕ್ ಶಾಲೆಯ ಪ್ರಾಂಶುಪಾಲೆ ಎಸ್.ಎನ್.ನಳಿನಾ ಗಿರೀಶ್ ಮಾತನಾಡಿ, ಭಾರತ್ ಸ್ಕೌಟ್ಸ್ ಗೈಡ್ಸ್ ಚಳವಳಿ ಮಕ್ಕಳನ್ನು ಮಾನಸಿಕವಾಗಿ ಹಾಗೂ ಶಾರೀರಿಕವಾಗಿ ಸದೃಢಗೊಳಿಸುವುದರ ಜೊತೆಗೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯರಾಗುವುದಕ್ಕೆ ಸಹಕಾರಿಯಾಗಿದೆ. ಶಾಲೆಯ ಶಿಸ್ತನ್ನು ದುಪ್ಪಟ್ಟುಗೊಳಿಸುತ್ತದೆ. ಎಲ್ಲಾ ಮಕ್ಕಳು ಈ ಚಳವಳಿಯಲ್ಲಿ ನೀಡುವ ಜೀವನ ಶಿಕ್ಷಣವನ್ನು ಅರ್ಥಮಾಡಿಕೊಂಡು ಅಳವಡಿಸಿಕೊಂಡರೆ ಈ ಸಂಸ್ಥೆಯ ಉದ್ದೇಶ ಸಾಕಾರಗೊಳ್ಳುತ್ತದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಜಿಲ್ಲಾ ಸಹಾಯಕ ಆಯುಕ್ತ ಎಂ. ಬಾಲಕೃಷ್ಣ, ತಾಲ್ಲೂಕು ಕಾರ್ಯದರ್ಶಿ ಕೊಟ್ರೇಶ್ ಎಸ್.ಉಪ್ಪಾರ್, ಶಿಕ್ಷಣ ಸಂಯೋಜಕ ತಿಮ್ಮಶೆಟ್ಟಿ, ತಾಲ್ಲೂಕು ಖಜಾಂಚಿ ಬಿ.ಎಸ್. ಹಿಮ, ತಾಲ್ಲೂಕು ಸಹ ಕಾರ್ಯದರ್ಶಿ ಎಚ್.ಡಿ. ಕುಮಾರ್, ಫ್ಲಾಕ್ ಲೀಡರ್ ಎಂ.ಎಲ್.ಎಲಿಜಬೆತ್, ಬೈರಾಪುರ ಶಾಲೆಯ ಮುಖ್ಯ ಶಿಕ್ಷಕ ಶಂಕರಶೆಟ್ಟಿ, ಎಚ್.ಸಿ. ಜ್ಯೋತಿ ಅಮೃತೇಶ್, ಎಸ್.ವಿ.ಪಬ್ಲಿಕ್ ಶಾಲೆಯ ಆಡಳಿತಾಧಿಕಾರಿ ಎಂ.ಎನ್. ಸುನಿಲ್, ರ್‍ಯಾಲಿಯಲ್ಲಿ ಎಸ್.ವಿ. ಪಬ್ಲಿಕ್ ಶಾಲೆಯ ಲೇಡಿ ಸ್ಕೌಟ್ ಮಾಸ್ಟರ್ ರೋಸ್ ಮೇರಿ, ನವ್ಯಶ್ರೀ, ಗೈಡ್ ಕ್ಯಾಪ್ಟನ್ ಸುಮಿತ್ರ, ಸ್ಕೌಟ್ ಮಾಸ್ಟರ್ ದೇವರಾಜ್, ಸತೀಶ್, ಬೆಥಸ್ದ ಆಂಗ್ಲ ಮಾಧ್ಯಮ ಶಾಲೆಯ ಗೈಡ್ ಕ್ಯಾಪ್ಟನ್ಸ್ ಶಿಲ್ಪಾಕೃತಿ, ಎಂ. ಚಂದ್ರಕಲಾ, ಸೌಮ್ಯ ಕಾವ್ಯ, ಅಶ್ವಿನಿ, ಕೆ.ಜೆ.ರಾಮಚಂದ್ರು, ರೋಹಿಣಿ ಇನ್ನಿತರರು ಹಾಜರಿದ್ದರು.

ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ಕತೆಗೆ ಮರುಳಾದ ಪ್ರೇಕ್ಷಕರು

100 ವರ್ಷದ ಹಿಂದಿನ ಪರಿಸ್ಥಿತಿ ತಿಳಿಯುವ ಪ್ರಯತ್ನ

• ಪ್ರಜೋದಯ ವರದಿ

ಹಾಸನ: ನೂರು ವರ್ಷಗಳ ಹಿಂದೆ ಇದ್ದ ಪರಿಸ್ಥಿತಿ ಈಗ ಇರುವ ಪರಿಸ್ಥಿತಿ ಎರಡನ್ನೂ ಪಕ್ಕಪಕ್ಕ ಇಟ್ಟು ನೋಡುವ ಪ್ರಯತ್ನ ಗೊರೂರು ನಾಟಕದ್ದಾಗಿದೆ. ನೂರು ವರ್ಷಗಳ ಹಿಂದೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಬರೆದ ಅನುಭವಗಳನ್ನು, ಊರಿನ ಕಥೆಯನ್ನು ಹೇಳಿದ್ದೇವೆ ಎಂದು ಮೈಸೂರಿನ ನಿರಂತರ ತಂಡದ ಸುಗುಣ ಎಂ.ಎಂ. ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಉಲಿವಾಲ ಸ್ಕೂಲ್ ಆಫ್ ಡ್ರಾಮಾ ಹಾಗು ಏಕತಾರಿ ಸಾಂಸ್ಕೃತಿಕ ಸಂಸ್ಥೆ ಏರ್ಪಡಿಸಿದ್ದ ಗೊರೂರು ನಾಟಕದ ಕಾರ್ಯಕ್ರಮಲ್ಲಿ ಮಾತನಾಡಿದರು.

ಹಿರಿಯ ಪತ್ರಕರ್ತೆ ಲೀಲಾವತಿ ಅವರು ಮಾತನಾಡಿ, ಗೊರೂರು ಅವರ ವ್ಯಕ್ತಿತ್ವ ಅತ್ಯಂತ ಪ್ರೇರಣಾದಾಯಕವಾದದ್ದು ಎಂದರಲ್ಲದೆ, ಹಾಸನದಲ್ಲಿ ರಂಗಾಭಿರುಚಿ ಮೂಡಿಸುತ್ತಿರುವ ಚಲಂ ಹಾಡ್ಲಹಳ್ಳಿ ಹಾಗು ಚಿನ್ನೇನಹಳ್ಳಿ ಸ್ವಾಮಿಯವರ ಪ್ರಯತ್ನ ಶ್ಲಾಘನೀಯವಾದ್ದು ಎಂದರು.

ಸರ್ಕಾರಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ್ ಅವರು ಮಾತನಾಡಿ, ಗೊರೂರು ರೀತಿಯ ನಾಟಕಗಳು ಹೆಚ್ಚೆಚ್ಚು ಪ್ರಯೋಗಗೊಳ್ಳಬೇಕು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ನಮ್ಮ ಜಿಲ್ಲೆಯ ಹೆಮ್ಮೆ. ಅವರ ಕೃತಿಗಳನ್ನು ಮತ್ತು ಅವರ ಚಿಂತನೆಗಳನ್ನು ನಾವು ಸಾಕಷ್ಟು ಅಧ್ಯಯನ ಮಾಡಬೇಕಿರುವ ಅವಶ್ಯಕತೆ ಈಗ ಹೆಚ್ಚಾಗಿದೆ ಎಂದು ಅಭಿಪ್ರಾಯಪಟ್ಟರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಾಹಿತಿ ಚಿನ್ನೇನಹಳ್ಳಿ ಸ್ವಾಮಿ ಅವರು, ರಂಗಸಂಘಟನೆ ನಾಟಕದ ವಿಚಾರದಲ್ಲಿ ಅತ್ಯಂತ ಮುಖ್ಯ ಪಾತ್ರ ವಹಿಸುತ್ತದೆ. ಮೈಸೂರಿನ ಗೆಳೆಯರು ನಮ್ಮನ್ನು ಸಂಪರ್ಕಿಸಿದಾಗ ಇದು ನಮ್ಮ ಜವಬ್ದಾರಿ ಹಾಗು ಕರ್ತವ್ಯ ಎಂದು ಭಾವಿಸಿ ಸಂಘಟನೆ ಮಾಡಿದೆವು ಎಂದು ಹೇಳಿದರು.

ಕಂಚಮಾರನಹಳ್ಳಿ ಕಾಂತ, ಸಮಾಜ ಸೇವಕಿ ಮಮತಾ ಶಿವು, ಸಾಹಿತಿ ಪೂರ್ಣಿಮಾ, ಉಲಿವಾಲ ಮೋಹನ್ ಕುಮಾರ್, ಕಸಾಪ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಮತ್ತಿತತರು ಹಾಜರಿದ್ದರು.

ತಮ್ಮದೇ ಸಮುದಾಯದವರ ಕತೆಯ ಜತೆಗೆ ಅಂದು ಗೊರೂರಿನಲ್ಲಿ ವಾಸವಾಗಿದ್ದ ಎಲ್ಲ ಸಮುದಾಯದ ಕತೆಯನ್ನು ಹೇಳಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ನಮ್ಮ ಊರಿನ ರಸಿಕರು ಪ್ರಬಂಧ ಸಂಕಲನವನ್ನು ಆಧರಿಸಿ ನಟಿಸಿದ ಗೊರೂರು ನಾಟಕ ಸಾಕಷ್ಟು ಸಂವಾದಕ್ಕೆ ಕಾರಣವಾಯಿತು. ಸುಮಾರು ಎರಡು ಗಂಟೆಗಳ ಅವಧಿಯ ನಾಟಕವನ್ನು ತುಂಬಿದ ಕಲಾಕ್ಷೇತ್ರದಲ್ಲಿ ಪ್ರೇಕ್ಷಕರು ಅಲುಗಾಡದೇ ಕುಳಿತು ನೋಡಿದ್ದು ವಿಶೇಷವಾಗಿತ್ತು.

ಇನ್ನೂ ಬದಲಾಗದ ಬ್ರಾಹ್ಮಣ ಸಮುದಾಯದ ಅನುಭವವನ್ನು ಪ್ರೇಕ್ಷಕರು ಪ್ರಸ್ತಾಪ ಮಾಡಿದರು. ಇದೇ ಕಾರಣಕ್ಕೆ ತಮ್ಮ ಸ್ವಂತ ಸಮುದಾಯದ ದೃಷ್ಟಿಯಲ್ಲಿ ಇಂದಿಗೂ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ತೀಕ್ಷ್ಣ ಟೀಕೆಗೆ ಗುರಿಯಾಗಿದ್ದಾರೆ. ನೂರು ವರ್ಷ ಕಳೆದರೂ ವಾತಾವರಣ ಏನೇನೂ ಬದಲಾಗಿಲ್ಲ ಎಂಬುದು ಪ್ರೇಕ್ಷಕರ ಅಭಿಮತವಾಗಿತ್ತು.

ರಂಗಸಂಘಟಕ ಚಲಂ ಹಾಡ್ಲಹಳ್ಳಿ ಕಾರ್ಯಕ್ರಮ ನಿರೂಪಿಸಿದರು.

ದೇಶದ ಮೊದಲ ಭಯೋತ್ಪಾದನಾ ವಿರೋಧಿ ನೀತಿ ಬಿಡುಗಡೆ

• ಪ್ರಜೋದಯ ವರದಿ

ಉಗ್ರರ ವಿರುದ್ಧ ಪ್ರಹಾರ್ ನಿರ್ಣಾಯಕ

ನವದೆಹಲಿ: ದೇಶದ ಮೊದಲ ಅಧಿಕೃತ ಭಯೋತ್ಪಾದನಾ ವಿರೋಧಿ ನೀತಿ ಪ್ರಹಾರ್ ಅನ್ನು ಕೇಂದ್ರ ಗೃಹ ಸಚಿವಾಲಯ ಬಿಡುಗಡೆ ಮಾಡಿದೆ. ಈ ನೀತಿಯು ಭಾರತವು ಸಾಂಪ್ರದಾಯಿಕ ಭಯೋತ್ಪಾದನೆಯನ್ನು ಮಾತ್ರವಲ್ಲದೆ ಸೈಬರ್ ದಾಳಿಗಳು, ಡಾರ್ಕ್ ವೆಬ್ ಮತ್ತು ಡ್ರೋನ್‌ಗಳಂತಹ ಅತ್ಯಾಧುನಿಕ ಸವಾಲುಗಳನ್ನು ಸಹ ಎದುರಿಸಲು ಸಂಪೂರ್ಣವಾಗಿ ಸಿದ್ಧವಾಗಿದೆ ಎಂದು ಸ್ಪಷ್ಟಪಡಿಸುತ್ತದೆ. ಶೂನ್ಯ ಭಯೋತ್ಪಾದನೆ ಕೇಂದ್ರ ಸರ್ಕಾರದ ಪ್ರಮುಖ ಗುರಿಯಾಗಿದೆ.

ಇದು ಸಾಂಪ್ರದಾಯಿಕ ಮತ್ತು ಪ್ರಮುಖ ಭಯೋತ್ಪಾದಕ ಬೆದರಿಕೆಗಳನ್ನು ಸಮಗ್ರ ಮತ್ತು ಸಂಘಟಿತ ರೀತಿಯಲ್ಲಿ ಪರಿಹರಿಸುವ ಗುರಿಯನ್ನು ಹೊಂದಿದೆ. ಕೇಂದ್ರ ಗೃಹ ಸಚಿವಾಲಯ ಸಿದ್ಧಪಡಿಸಿದ ಈ ನೀತಿಯು ಗಡಿಯಾಚೆಗಿನ ಭಯೋತ್ಪಾದನೆಯನ್ನು ಮಾತ್ರವಲ್ಲದೆ ಆಧುನಿಕ ಯುಗದ ಸಂಕೀರ್ಣ ಡಿಜಿಟಲ್ ಮತ್ತು ತಾಂತ್ರಿಕ ಬೆದರಿಕೆಗಳನ್ನು ಸಹ ಎದುರಿಸಲು ಒಂದು ಮಾಸ್ಟರ್ ಪ್ಲಾನ್ ಆಗಿದೆ.

ಪ್ರಹಾರ್ ನೀತಿಯು ಈಗ ಭೂಮಿ, ನೀರು ಮತ್ತು ವಾಯು ಎಂಬ ಮೂರು ರಂಗಗಳಲ್ಲಿಯೂ ಭಯೋತ್ಪಾದಕ ಬೆದರಿಕೆಗಳನ್ನು ಭಾರತ ಎದುರಿಸಲು ಸಂಪೂರ್ಣವಾಗಿ ಸಿದ್ಧವಾಗಿದೆ ಎಂದು ಸ್ಪಷ್ಟಪಡಿಸುತ್ತದೆ. ದೇಶದ ಪ್ರಮುಖ ಆರ್ಥಿಕ ವಲಯಗಳಾದ ವಿದ್ಯುತ್, ರೈಲ್ವೆ, ವಾಯುಯಾನ, ಬಂದರುಗಳು, ರಕ್ಷಣೆ, ಬಾಹ್ಯಾಕಾಶ ಮತ್ತು ಪರಮಾಣು ಇಂಧನವನ್ನು ರಕ್ಷಿಸಲು ವಿಶೇಷ ಕಾರ್ಯವಿಧಾನಗಳ ಅಭಿವೃದ್ಧಿಗೆ ಇದು ಒತ್ತು ನೀಡುತ್ತದೆ.

ಗಡಿಯಾಚೆಗಿನ ಭಯೋತ್ಪಾದನೆಯ ಜೊತೆಗೆ, ಕ್ರಿಮಿನಲ್ ಹ್ಯಾಕರ್‌ಗಳು ಮತ್ತು ಕೆಲವು ದೇಶಗಳು ಸೈಬರ್ ದಾಳಿಯ ಮೂಲಕ ಭಾರತವನ್ನು ಗುರಿಯಾಗಿಸಿಕೊಂಡಿವೆ ಎಂದು ಗೃಹ ಸಚಿವಾಲಯ ತನ್ನ ವರದಿಯಲ್ಲಿ ತಿಳಿಸಿದೆ. ಇದಲ್ಲದೆ, ಪಂಜಾಬ್ ಮತ್ತು ಜಮ್ಮು ಮತ್ತು ಕಾಶ್ಮೀರದಂತಹ ಪ್ರದೇಶಗಳಲ್ಲಿ ಡ್ರೋನ್‌ಗಳು ಮತ್ತು ರೊಬೊಟಿಕ್‌ನ ದುರುಪಯೋಗವನ್ನು ಪ್ರಮುಖ ಸವಾಲು ಎಂದು ಗುರುತಿಸಲಾಗಿದೆ.

ನೀತಿಯು ಅಲ್ ಖೈದಾ ಮತ್ತು ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಮತ್ತು ಸಿರಿಯಾದಂತಹ ಜಾಗತಿಕ ಭಯೋತ್ಪಾದಕ ಸಂಘಟನೆಗಳನ್ನು ಉಲ್ಲೇಖಿಸುತ್ತದೆ. ಈ ಸಂಘಟನೆಗಳು ಸ್ಲೀಪರ್ ಸೆಲ್‌ಗಳ ಮೂಲಕ ಭಾರತದಲ್ಲಿ ಹಿಂಸಾಚಾರವನ್ನು ಪ್ರಚೋದಿಸಲು ಪ್ರಯತ್ನಿಸುತ್ತಿವೆ ಎಂದು ಹೇಳುತ್ತದೆ. ವಿದೇಶಿ ನೆಲದಿಂದ ಕಾರ್ಯ ನಿರ್ವಹಿಸುತ್ತಿರುವ ಹಿಂಸಾತ್ಮಕ ಉಗ್ರಗಾಮಿ ಅಂಶಗಳು ಭಾರತದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ಉತ್ತೇಜಿಸಲು ಪಿತೂರಿ ನಡೆಸುತ್ತಿವೆ.

15ನೇ ಹಣಕಾಸು ಯೋಜನೆ ಹಣ ಮಾ.15ರೊಳಗೆ ಬಳಕೆಯಾಗಲಿ

ಗ್ರಾ.ಪಂ. ಆಡಳಿತಾಧಿಕಾರಿಗಳಿಗೆ ಸೂಚನೆ | ತಾ.ಪಂ. ಕಚೇರಿಯಲ್ಲಿ ಸಾಮಾನ್ಯ ಸಭೆ

• ಪ್ರಜೋದಯ ವರದಿ



ಅರಕಲಗೂಡು: ತಾಲ್ಲೂಕಿನ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳು ನಿಯೋಜನೆಗೊಂಡಿದ್ದು, 15ನೇ ಹಣಕಾಸು ಯೋಜನೆಯ ಹಣವನ್ನು ಮಾರ್ಚ್ 18ರ ಒಳಗೆ ಬಳಕೆಯಾಗಬೇಕೆಂದು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ, ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಎಂ.ಬಾಬು ಅವರು ಸೂಚಿಸಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಇನ್ನೂ 15ನೇ ಹಣಕಾಸು ಯೋಜನೆ ಅನುದಾನ ಹಂಚಿಕೆ ಕುರಿತು ಕ್ರಿಯಾಯೋಜನೆ ಸಿದ್ದಪಡಿಸಿಲ್ಲ, ಬಾಕಿ ಉಳಿದಿರುವುದು 20 ದಿನಗಳು ಬಾಕಿ ಇದೆ. ಇಷ್ಟೊಂದು ಕಡಿಮೆ ಅವಧಿಯಲ್ಲಿ ಹೇಗೆ ಅನುದಾನ ಹಂಚಿಕೆ ಕಾರ್ಯಾದೇಶ ಪಡೆಯುವುದು ಯಾವಾಗ, ಅನುದಾನ ಬಳಕೆ ಮಾಡಲು ಸಾಧ್ಯವೇ. ಇಂತಹ ಪಂಚಾಯಿತಿಯ ಆಡಳಿತಾಧಿಕಾರಿಗಳು ಇಂದಿನಿಂದಲೇ ಕಾರ್ಯಪ್ರವೃತ್ತರಾಗಬೇಕಿದೆ. 15ನೇ ಹಣಕಾಸು ಯೋಜನೆ ಸಂಪೂರ್ಣ ಬಳಕೆಯಾಗದಿದ್ದರೇ 16ನೇ ಹಣಕಾಸು ಅನುದಾನ ಬರುವುದಿಲ್ಲವೆಂದು ಎಚ್ಚರಿಸಿದರು.

ಇ-ಖಾತಾ ಆಂದೋಲನ

ಗ್ರಾಮ ಪಂಚಾಯಿತಿಗಳಲ್ಲಿ ಅತೀ ಜರೂರಾಗಿ ಆಸ್ತಿಗಳ ಖಾತೆಗಳು ಆಗಬೇಕಿದೆ. ಅದರಲ್ಲಿಯೂ ಪ್ರಮುಖವಾಗಿ ಇ-ಖಾತೆಯನ್ನು ಕೈಗೊಳ್ಳುವ ಸಲುವಾಗಿ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇ-ಖಾತಾ ಆಂದೋಲನ ಹಮ್ಮಿಕೊಂಡು ನಿಗದಿತ ಅವಧಿಯೊಳಗೆ ಗುರಿ ಮುಟ್ಟಬೇಕಿದೆ. ಇದು ಆಡಳಿತಾಧಿಕಾರಿಗಳ ಲಾಗಿನ್‌ನಲ್ಲಿಯೇ ಆಗಬೇಕಿದೆ. ಅದಕ್ಕೆ ಅಗತ್ಯವಿರುವ ಮಾಹಿತಿಯನ್ನು ಒಂದು ವಾರದೊಳಗೆ ಪಂಚಾಯಿತಿಗಳಿಗೆ ಸಲ್ಲಿಸಬೇಕೆಂದು ಸಭೆಯಲ್ಲಿ ಗ್ರಾಮ ಪಂಚಾಯತಿ ಆಡಳಿತಾಧಿಕಾರಿಗಳಿಗೆ ಸೂಚನೆ ನೀಡಿದರು.

ಮೋಟಾರ್ ಪಂಪ್ ಅಳವಡಿಸಿ

ತಾಲ್ಲೂಕಿನಲ್ಲಿ ಜೆಜೆಎಂ ಕಾಮಗಾರಿ ಪ್ರಗತಿಯಲ್ಲಿದೆ. ಸುಮಾರು 20 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೊಳವೆಬಾವಿ ಕೊರೆದಿದ್ದು, ಇನ್ನೂ ಕೂಡ ಮೋಟಾರ್, ಪಂಪ್ ಅಳವಡಿ ಸಿಲ್ಲ. ಈಗಾಗಲೇ ಬೇಸಿಗೆ ಆರಂಭಗೊಂಡಿ ರುವ ಪರಿಣಾಮ ಕುಡಿಯುವ ನೀರಿಗೆ ಅಭಾವ ಉಂಟಾಗುವ ಸಾಧ್ಯತೆ ಇದೆ. ಕೂಡಲೇ ಮೋಟಾರ್ ಪಂಪ್ ಅಳವಡಿಸುವ ಕೆಲಸ ಕೈಗೊಳ್ಳ ಬೇಕೆಂದು ಜೆಜೆಎಂ ಎಇಇ ನವೀನ್ ಅವರಿಗೆ ಇಒ ಶ್ರೀನಿವಾಸ್ ಮಾಹಿತಿ ನೀಡಿದರು.

ಜಿ ರಾಮ್ ಜಿ ಗೆ ಒತ್ತು ನೀಡಿ

ಈ ಸಾಲಿನಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅನುಷ್ಟಕ್ಕೆ ಬರುವ ಜಿ ರಾಮ್ ಜಿ ಯೋಜನೆಯ ಬಳಕೆ ಕುರಿತು ಯೋಜನೆ ಸಿದ್ದಗೊಳ್ಳಬೇಕಿದೆ. ಹೊಸ ಯೋಜನೆಯಡಿ ಈ ಹಿಂದೆ ಕೈಗೊಳ್ಳಲಾಗುತ್ತಿದ್ದ ಕಾಮಗಾರಿಗಳನ್ನು ಕೈಗೊಳ್ಳುವುದು ಕಷ್ಟಕರವಾಗಿದೆ. ಈ ಸಲುವಾಗಿ ಹೊಸದಾಗಿ ಕಾಮಗಾರಿ ಸಿದ್ದಗೊಳಿಸಿಕೊಳ್ಳಿ ಎಂದು ಎಂ.ಬಾಬು ಸಲಹೆ ನೀಡಿದರು.

ತೋಟಗಾರಿಕೆ ಇಲಾಖೆ ಅಧಿಕಾರಿ ರಾಜೇಶ್ ಅವರು ಮಾತನಾಡಿ, ತೋಟಗಾರಿಕೆ ಬೆಳೆಗಳಾದ ಅಡಿಕೆ, ತೆಂಗು ಕೃಷಿಯಲ್ಲಿ ಅಂತರ್ ಬೇಸಾಯ ಕೈಗೊಳ್ಳುವುದರಿಂದ ಉದ್ಯೋಗ ಸೃಷ್ಟಿಸಬಹು ದಾಗಿದೆ. ಈ ನಿಟ್ಟಿನಲ್ಲಿ ಇಲಾಖೆ ಗಮನರಿಸಲು ಸಿದ್ಧತೆ ನಡೆಸುತ್ತಿದೆ. ಅದೇ ರೀತಿ ಕೃಷಿ, ರೇಷ್ಮೆ ಇಲಾಖೆಗಳು ಈ ನಿಟ್ಟಿನಲ್ಲಿ ಮುಂದಾಗಬೇಕಿದೆಯೆಂದು ತಿಳಿಸಿದರು.

ಅಂಬೇಡ್ಕರ್ ಭವನ ಕಾಮಗಾರಿ ಆರಂಭಿಸಿ

ಪಟ್ಟಣದಲ್ಲಿನ ಅಂಬೇಡ್ಕರ್ ಭವನದ ಮುಂದುವರಿದ ಕಾಮಗಾರಿಗೆ ಈಗಾಗಲೇ 37 ಲಕ್ಷ ರೂ. ಅನುದಾನ ಬಿಡುಗಡೆಯಾಗಿದೆ. ಈಗಾಗಲೇ ಕೆಲಸ ಆರಂಭಗೊಂಡಿದ್ದರೇ ಬಾಕಿ 1.17 ಕೋಟಿ ರೂ. ಬರುತ್ತಿತ್ತು. ಪಂಚಾಯತ್ ರಾಜ್ ಇಲಾಖೆ ಇನ್ನೂ ಕೂಡ ಕೆಲಸ ಆರಂಭಿಸಿಲ್ಲ, ಅದರಿಂದ ಸಮುದಾಯದಿಂದ ಆರೋಪಗಳು ಕೇಳಿಬರುತ್ತಿವೆ ಎಂದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರವಿಕುಮಾರ್ ಸಭೆಯ ಗಮನಕ್ಕೆ ತಂದರು. ಅನುದಾನ ಬಂದು ತಿಂಗಳು ಕಳೆದಿದೆ. ಏಕೆ ಇನ್ನೂ ಕೆಲಸ ಆರಂಭಿಸಿಲ್ಲ ಎಂದು ಆಡಳಿತಾಧಿಕಾರಿ ಜಿಲ್ಲಾ ಪಂಚಾಯಿತಿ ಎಇಇ ಅವರನ್ನು ಪ್ರಶ್ನಿಸಿದರು. ಒಂದುವಾರದಲ್ಲಿ ಟೆಂಡರ್ ಪ್ರಕ್ರಿಯೆ ಮುಗಿಸಿ ಕೆಲಸ ಆರಂಭಿಸುವ ಭರವಸೆ ನೀಡಿದರು.

ಶುದ್ಧ ನೀರು ಒದಗಿಸಿ

ತಜ್ಞರ ಮಾಹಿತಿ ಮೇರೆಗೆ ಈ ಬಾರಿ ಬೇಸಿಗೆಯ ತಾಪಮಾನ ಅಧಿಕಗೊಳ್ಳುತ್ತದೆಂದು ಹೇಳಲಾಗುತ್ತಿದೆ. ಈ ಬಗ್ಗೆ ಸಾರ್ವಜನಿಕವಾಗಿ ಆರೋಗ್ಯ ಇಲಾಖೆ ಮಾಹಿತಿ ನೀಡುವ ಜೊತೆಗೆ ಶುದ್ಧ ನೀರು ಸರಬರಾಜಿಗೆ ಸಂಬಂಧಪಟ್ಟ ಇಲಾಖೆಗಳಿಗೆ ತಿಳುವಳಿಕೆ ನೀಡುವುದು ಕಡ್ಡಾಯ ವಾಗಿದೆ. ಹೆಚ್ಚು ಜನರು ಸೇರುವ ಸಂತೆ, ಜಾತ್ರೆ ಇತರೆ ಸಾರ್ವಜನಿಕ ಸ್ಥಳದಲ್ಲಿ ಶುದ್ಧ ನೀರು ಸೇವನೆ ಕುರಿತು ಅರಿವು ಮೂಡಿಸಬೇಕೆಂದು ಆರೋಗ್ಯಾಧಿಕಾರಿ ಡಾ|| ಪುಷ್ಪಲತಾ ಅವರಿಗೆ ತಿಳಿಸಿದರು.

ಸಭೆಯಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಶ್ರೀನಿವಾಸ್, ಸಹಾಯಕ ನಿರ್ದೇಶಕ ಪ್ರಕಾಶ್ ಮತ್ತಿತರರಿದ್ದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಿಸಿ

ಕಳೆದ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಉತ್ತಮ ಸ್ಥಾನ ಪಡೆದಿದೆ. ಈ ಬಾರಿ ಜಿಲ್ಲೆಗೆ ತಾಲ್ಲೂಕು ಮೊದಲ ಸ್ಥಾನ ಪಡೆಯಬೇಕು. ತಾಲೂಕಿನ ಎಲ್ಲಾ ಶಾಲೆಗಳ ಮಕ್ಕಳು ಅತ್ಯುತ್ತಮ ಅಂಕಗಳನ್ನು ಪಡೆದು ಶೇ.100ರಷ್ಟು ದಾಖಲೆ ಫಲಿತಾಂಶವನ್ನು ಪಡೆಯಬೇಕು. ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಂಡು ಮಕ್ಕಳನ್ನು ಸಜ್ಜುಗೊಳಿಸಬೇಕೆಂದು ಆಡಳಿತಾಧಿಕಾರಿ ಬಾಬು ಸೂಚನೆ ನೀಡಿದರು.

ನವದೆಹಲಿಯ ವಾಣಿಜ್ಯ ಭವನದಲ್ಲಿ ಕೇಂದ್ರ ವಾಣಿಜ್ಯ ಸಚಿವಾಲಯದ ಮುಖ್ಯ ಕಾರ್ಯದರ್ಶಿ ರಾಜೇಶ್ ಅಗರವಾಲ್ ಮತ್ತು ಅಪರ ಕಾರ್ಯದರ್ಶಿ ನಿತಿನ್ ಕುಮಾರ್ ಯಾದವ್ (ಕೃಷಿ) ಅವರನ್ನು ಭೇಟಿಯಾಗಿ ತಂಬಾಕು ಬೆಳೆಯ ಬೆಲೆ ಕುಸಿತ, ರೈತರ ಸಂಕಷ್ಟ, ಜಿಎಸ್‌ಟಿಯಿಂದ ಆಗುತ್ತಿರುವ ತೊಂದರೆ ಹಾಗು ತಂಬಾಕಿಗೆ ಉತ್ತಮ ಬೆಲೆ ಕಲ್ಪಿಸಿ ಕೊಡಬೇಕೆಂದು ಮನವಿ ಸಲ್ಲಿಸಿದರು.

ಮೂಲ ಸ್ವರೂಪ ಬದಲಿಸಿ ಹೊಸ ಜಿಲ್ಲಾಡಳಿತ ಭವನ

» ಮೊದಲನೇ ಪುಟದಿಂದ

ಮೊದಲ ಹಂತ, ಎರಡನೇ ಹಂತದ ಕಾಮಗಾರಿ ಎಂಬ ಯಾವ ಉಲ್ಲೇಖವೂ ಇಲ್ಲ. ಆದರೆ, ಈಗ ಹಂತ ಹಂತವಾಗಿ ಕಾಮಗಾರಿ ನಡೆಯುತ್ತಿದ್ದು, ಹೆಚ್ಚುವರಿ ಹಣಕ್ಕೆ ಬೇಡಿಕೆ ಇಡಲಾಗುತ್ತಿದೆ. 2ನೇ ಹಂತದ ಕಾಮಗಾರಿಗೆ 20 ಕೋ. ರೂ. ಖರ್ಚಾಗಿದೆ. ಕಟ್ಟಡದ ಮೂಲ ಪ್ಲ್ಯಾನ್‌ನಲ್ಲಿ 110 ಪಿಲ್ಲರ್ ಮಾತ್ರ ಇತ್ತು ಈಗ 220 ಪಿಲ್ಲರ್ ಹಾಕಲಾಗಿದೆ. ಅಷ್ಟೊಂದು ಪಿಲ್ಲರ್ ಏಕೆಂದು ಗೊತ್ತಿಲ್ಲವೆಂದು ಅಧಿಕಾರಿಗಳು, ಇಂಜಿನೀಯರ್‌ಗಳ ವಿರುದ್ಧ ಸಚಿವರು ಗರಂ ಆದರು.

ಪ್ರಸ್ತುತ ಆಗಿರುವ ಕೆಲಸಕ್ಕೆ 6.97 ಕೋ.ರೂ. ಬಿಲ್ ಪಾವತಿಸಬೇಕಿದೆ. ಹೆಚ್ಚುವರಿ 18 ಕೋ.ರೂ. ಹಣವನ್ನು ಕಂದಾಯ ಇಲಾಖೆಯಿಂದ ಕೇಳಲಾಗುತ್ತಿದೆ. ಹೀಗಾಗಿ ಮುಂದಿನ ವಾರದಲ್ಲಿ ತಾಂತ್ರಿಕ ತಂಡದ ಜೊತೆ ಮತ್ತೊಮ್ಮೆ ಪರಿಶೀಲನೆ ನಡೆಸಿ, ನಂತರ ಇನ್ನೂ ಎಷ್ಟು ಹಣ ಬೇಕೆಂದು ತಿಳಿಸಿದರೆ ಹಣ ಬಿಡುಗಡೆಗೆ ಕ್ರಮ ವಹಿಸಲಾಗುವುದು. ಕಟ್ಟಡ ಕಾಮಗಾರಿಗೆ ವೇಗ ನೀಡಲು ಮುಂದಾಗುವಂತೆ ಇದೇ ವೇಳೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಸಭೆಯಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ವಲಯ ಆಯುಕ್ತರಾದ ಆದಿತ್ಯ ಆಮ್ಲಾನ್ ಬಿಶ್ವಾಸ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಮುಖ್ಯ ಇಂಜಿನೀಯರ್, ಇತರೆ ಅಧಿಕಾರಿಗಳು ಹಾಜರಿದ್ದರು.

ಅಪಘಾತದಲ್ಲಿ ಗಾಯಗೊಂಡವರ ನೆರವಿಗೆ ಧಾವಿಸಿದ ಮಾಜಿ ಸಚಿವ ರೇವಣ್ಣ

• ಪ್ರಜೋದಯ ವರದಿ

ಹಾಸನ: ಅಪಘಾತದಲ್ಲಿ ಗಾಯಗೊಂಡಿದ್ದ ಗಾಯಾಳುಗಳನ್ನು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಆಸ್ಪತ್ರೆಗೆ ಸೇರಿಸಿ ಮಾನವೀಯತೆ ಮೆರೆದಿದ್ದಾರೆ.

ಸೋಮವಾರ ಬೆಳಿಗ್ಗೆ ಹೊಳೆನರಸೀಪುರ ತಾಲ್ಲೂಕಿನ ಮಾವನೂರು ಬಳಿ ಇನ್ನೋವಾ ಕಾರಿಗೆ ಮತ್ತೊಂದು ಕಾರು ಡಿಕ್ಕಿಯಾಗಿ ಕಾರಿನಲ್ಲಿದ್ದವರು ಗಂಭೀರ ಗಾಯಗೊಂಡಿದ್ದರು. ಅದೇ ಮಾರ್ಗದಲ್ಲಿ ಸಾಗುತ್ತಿದ್ದ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಕಾರು ನಿಲ್ಲಿಸಿ ತಕ್ಷಣವೇ ಗಾಯಾಳುಗಳನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಪೊಲೀಸರಿಗೆ ಕರೆ ಮಾಡಿದ ಅವರು, ಇನ್ನೋವಾ ಕಾರಿಗೆ ಡಿಕ್ಕಿ ಮಾಡಿದ ಮತ್ತೊಂದು ಕಾರು ಚಾಲಕ ಪರಾರಿಯಾಗಿದ್ದು ತಕ್ಷಣ ಪತ್ತೆ ಮಾಡಬೇಕೆಂದು ನಿರ್ದೇಶನ ನೀಡಿದರು. ಹೊಳೆನರಸೀಪುರ ಪೊಲೀಸರು ಡಿಕ್ಕಿ ಮಾಡಿದ ಕಾರನ್ನು ವಶಕ್ಕೆ ಪಡೆದಿದ್ದಾರೆ. ಗಾಯಾಳುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಾಂಗ್ರೆಸ್ ಮುಖಂಡರೊಂದಿಗೆ ಕಾಣಿಸಿಕೊಂಡ ಪ್ರೀತಮ್‌ಗೌಡ

• ಪ್ರಜೋದಯ ವರದಿ



ಹಾಸನ: ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಮಾಜಿ ಶಾಸಕ ಪ್ರೀತಮ್ ಜೆ.ಗೌಡ ಅವರು ಮೈಸೂರಿನಲ್ಲಿ ಕಾಂಗ್ರೆಸ್‌ಮುಖಂಡರ ಜೊತೆ ಕಾಣಿಸಿಕೊಳ್ಳುವ ಮೂಲಕ ರಾಜಕೀಯ ವಲಯದಲ್ಲಿ ಹಲವು ರೀತಿಯ ಚರ್ಚೆ ಹುಟ್ಟುಹಾಕಿದ್ದಾರೆ.

ಮೈಸೂರು ನಗರದ ಲಲಿತಾ ಮಹಲ್ ಪ್ಯಾಲೇಸ್‌ನಲ್ಲಿ ಕಾಂಗ್ರೆಸ್ ಶಾಸಕ ಕೆ.ಹರೀಶ್ ಗೌಡ ಹಾಗು ಕಾಂಗ್ರೆಸ್ ಮಾಜಿ ಜಿಲ್ಲಾಧ್ಯಕ್ಷ ಜಾವಗಲ್ ಮಂಜುನಾಥ್ ಹಾಗು ಇತರರೊಂದಿಗೆ ಒಂದೇ ಕಾರಿನಲ್ಲಿ ಕಾಣಿಸಿಕೊಂಡಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಪ್ರೀತಮ್‌ಗೌಡ ಅವರು ಇತ್ತೀಚೆಗೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಗೆ ವಿರೋಧ ವ್ಯಕ್ತಪಡಿಸಿ ನೀಡಿದ್ದ ಹೇಳಿಕೆ ಹೆಚ್ಚು ಚರ್ಚೆಗೆ ಗ್ರಾಸವಾಗಿತ್ತು. ಈ ನಡುವೆ ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಅವರು, ಪ್ರೀತಮ್‌ಗೌಡ ಅವರು ಕಾಂಗ್ರೆಸ್ ಸೇರಲು ಟವೆಲ್ ಹಾಕಿದ್ದಾರೆಂಬಹೇಳಿಕೆನೀಡಿದ್ದರು. ಈನಡುವೆ ಪ್ರೀತಮ್ ಗೌಡ ಅವರು ಕಾಂಗ್ರೆಸ್ ಮುಖಂಡರ ಜೊತೆ ಕಾಣಿಸಿಕೊಂಡು ಹಲವು ರೀತಿಯ ಚರ್ಚೆಗೆ ಕಾರಣವಾಗಿದ್ದಾರೆ. ಪ್ರೀತಮ್‌ಗೌಡ ಅವರ ಈ ನಡೆ ಬಿಜೆಪಿ ಕಾರ್ಯಕರ್ತರಲ್ಲೂ ಅಚ್ಚರಿ ಮೂಡಿಸಿದೆ.

ಈ ಬಗ್ಗೆ ಕಾಂಗ್ರೆಸ್ ಮಾಜಿ ಜಿಲ್ಲಾಧ್ಯಕ್ಷ ಜಾವಗಲ್ ಮಂಜುನಾಥ್ ಅವರು ಪತ್ರಿಕೆಯೊಂದಿಗೆ ಮಾತನಾಡಿ, ಪ್ರೀತಮ್‌ಗೌಡ ಅವರು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಅವರು ಕಾಂಗ್ರೆಸ್‌ಗೆ ಸೇರುವ ಬಗ್ಗೆ ನಮ್ಮೊಂದಿಗೆ ಯಾವುದೇ ಚರ್ಚೆ ನಡೆಸಿಲ್ಲ, ಮದುವೆ ಸಮಾರಂಭಕ್ಕೆಂದು ಮೈಸೂರಿನ ಲಲಿತಾ ಮಹಲ್ ಪ್ಯಾಲೇಸ್‌ಗೆ ನಮ್ಮ ಪಕ್ಷದ ಶಾಸಕರಾದ ಹರೀಶ್‌ಗೌಡ ಅವರೊಂದಿಗೆ ಹೋಗಿದ್ದ ವೇಳೆ ಅಲ್ಲಿ ಸಿಕ್ಕ ಪ್ರೀತಮ್‌ಗೌಡ ಅವರು ನಮ್ಮೊಂದಿಗೆ ಮಾತುಕತೆ ನಡೆಸಿ, ಎಳನೀರು ಕುಡಿಯಲೆಂದು ಒಂದೇ ಕಾರಿನಲ್ಲಿ ಒಟ್ಟಿಗೆ ಹೋಗಿದಷ್ಟೇ. ಅದರಲ್ಲಿ ಯಾವುದೇ ರಾಜಕೀಯವಿಲ್ಲ ಎಂದು ಹೇಳಿದರು.

ಫೆ.28ರಂದು ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು 55 ವರ್ಷಗಳನ್ನು ಪೂರೈಸಿರುವ ಹಿನ್ನಲೆಯಲ್ಲಿ ಫೆ.28 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ರಾಜ್ಯ ಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ, ಧನ್ಯತಾ ಸಮಾರಂಭ, ಸಂಘದ ಸುವರ್ಣ ಮಹೋತ್ಸವ ಹಾಗೂ ಗುರು ವಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರ ನಾಯಕರಹಳ್ಳಿ ಅವರು ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಸೇರಿ ವಿವಿಧ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಇಲಾಖೆ ಅಧಿಕಾರಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಪ್ರತಿ ಜಿಲ್ಲೆಯ ಒಬ್ಬ ಸಾಧಕ ಶಿಕ್ಷಕನಿಗೆ ಮಹಾತ್ಮ ಜ್ಯೋತಿ ಬಾಪುಲೆ ಪ್ರಶಸ್ತಿ ಹಾಗೂ ಒಬ್ಬ ಸಾಧಕಿ ಶಿಕ್ಷಕಿಗೆ ಮಾತೆ ಸಾವಿತ್ರಿ ಬಾಪುಲೆ ಪ್ರಶಸ್ತಿ ನೀಡಿ ಗೌರವಿಸ ಲಾಗುವುದು. ಗಣ್ಯರು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ಸಮ್ಮೇಳನದಲ್ಲಿ ಭಾಗ ವಹಿಸುವ ಶಿಕ್ಷಕರಿಗೆ ಅನ್ಯ ಕಾರ್ಯ ನಿಮಿತ್ತ ರಜೆ ಸೌಲಭ್ಯವಿದೆ. ಹಾಗಾಗಿ, ಜಿಲ್ಲೆಯ ಎಲ್ಲಾ ಶಿಕ್ಷಕರು ಸಮ್ಮೇಳನದಲ್ಲಿ ಭಾಗವಹಿಸಿ ಯಶಸ್ವಿ ಗೊಳಿಸಬೇಕೆಂದು ಹೇಳಿದರು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ವಿ.ಜಿ. ದ್ಯಾವೇಗೌಡ ಅವರು ಮಾತನಾಡಿ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ನಮ್ಮ ಶಿಕ್ಷಕರ ಸಮಸ್ಯೆಗಳಿಗೆ ಸಂದಿಸುತ್ತಾ ಸರ್ಕಾರದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ. ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ತತ್ವದೊಂದಿಗೆ ಸಾಗುತ್ತಿರುವ ಈ ಸಂಘಟನೆ ದೇಶದ ಮಾದರಿ ಶಿಕ್ಷಕರ ಸಂಘಟನೆಗಳಲ್ಲೊಂದು ಎಂದರು.

ಶಿಕ್ಷಕರ ದೀರ್ಘಕಾಲದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಂಘ ನಿರಂತರ ಪ್ರಯತ್ನ ನಡೆಸಿದ್ದು, ಕಳೆದ ಆರು ತಿಂಗಳಲ್ಲಿ ಸಂಘ ಸಾಧಿಸಿದ ಪ್ರಮುಖ ಸಾಧನೆಗಳು ವೃಂದ ಮತ್ತು ನೇಮಕಾತಿ ನಿಯಮ ಗಳಲ್ಲಿ ಶಿಕ್ಷಕರ ಪರ ತಿದ್ದುಪಡಿ, ಸಹ ಶಿಕ್ಷಕರಿಂದ ಮುಖ್ಯೋಪಾಧ್ಯಾಯ ಹಾಗೂ ಪ್ರೌಢ ಶಾಲಾ ಶಿಕ್ಷಕರಿಗೆ ಬಡ್ತಿ ನಿಯಮಾ ವಳಿ, ಹಿರಿಯ ಮುಖ್ಯ ಶಿಕ್ಷಕರಿಗೆ ಕೌನ್ಸಿಲಿಂಗ್ ಮೂಲಕ ಬಡ್ತಿ, ದೈಹಿಕ ಶಿಕ್ಷಣ ಶಿಕ್ಷಕರಿಗೆ ಗ್ರೇಡ್-1 ಬಡ್ತಿ, ರಾಜ್ಯದ 1.5 ಲಕ್ಷ ಶಿಕ್ಷಕರಿಗೆ ಉಚಿತ ಐಟಿ ಹಾಗೂ ಇ-ಫೈಲಿಂಗ್ ಸೌಲಭ್ಯ, ಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ನಿರ್ವ ಹಣೆಗೆ ಅನುದಾನ, ಮಹಿಳಾ ಶಿಕ್ಷಕರಿಗೆ ವೇತನ ಸಹಿತ ಋತುಚಕ್ರ ರಜೆ, ಆಕಸ್ಮಿಕ ನಿಧನರಾದ ಶಿಕ್ಷಕರ ಕುಟುಂಬ ಗಳಿಗೆ ಲಕ್ಷಾಂತರ ಪರಿಹಾರ, 45 ಸಾವಿರಕ್ಕೂ ಹೆಚ್ಚು ಶಿಕ್ಷಕರಿಗೆ ವರ್ಗಾವಣೆ ಭಾಗ್ಯ, ಅನಗತ್ಯ ಹಾಜರಾತಿ ಆ್ಯಪ್‌ಗಳ ರದ್ದತಿ, ವಿದ್ಯುತ್ ಬಿಲ್ ಉಚಿತ, ಕ್ರೀಡಾ ಚಟುವಟಿಕೆಗಳಿಗೆ ಪ್ರತ್ಯೇಕ ಅನುದಾನ ಸೇರಿ ಹಲವು ಶಿಕ್ಷಕಪರ ನಿರ್ಣಯಗಳನ್ನು ಸರ್ಕಾರ ಹಾಗೂ ಶಿಕ್ಷಣ ಇಲಾಖೆ ಗಮನ ಸೆಳೆದು ಅನೇಕ ಬೇಡಿಕೆಗಳನ್ನು ಈಡೇರಿಸಿಕೊಳ್ಳಲಾಗಿದೆಂದು ತಿಳಿಸಿದರು.

ಶಿಕ್ಷಕರ ಖಾಲಿ ಹುದ್ದೆ ಭರ್ತಿ, ಇತ್ತೀಚಿನ ವರ್ಷಗಳಲ್ಲಿ ರಚನೆಯಾಗಿರುವ ತಾಲ್ಲೂಕು ಕೇಂದ್ರಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಆರಂಭಿಸುವುದು, ಪ್ರತಿಭಾ ಕಾರಂಜಿಗೆ ಹೆಚ್ಚಿನ ಅನುದಾನ ಬಿಡುಗಡೆ, ಬಡ್ತಿ ಗೊಂದಲ ನಿವಾರಣೆ, ಹಳೆ ಪಿಂಚಣಿ ವ್ಯವಸ್ಥೆ ಜಾರಿಗೊಳಿಸುವುದು ಸೇರಿ ಸುಮಾರು 27 ಹಕ್ಕೋತ್ತಾಯಗಳನ್ನು ಇದೇ ಸಂದರ್ಭದಲ್ಲಿ ಮಂಡಿಸಲಾಗು ವುದು. ತಾಲ್ಲೂಕಿ ನಲ್ಲಿರುವ ಶಿಕ್ಷಕರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗ ವಹಿಸಿ ಸಮ್ಮೇಳನ ಯಶಸ್ವಿ ಗೊಳಿಸ ಬೇಕೆಂದು ಮನವಿ ಮಾಡಿದರು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಡಿ.ಎನ್. ರವಿ, ಗೌರವಾಧ್ಯಕ್ಷ ಕೆ.ಮಂಜೇಗೌಡ, ಪ್ರಧಾನ ಕಾರ್ಯದರ್ಶಿ ಗಾಯತ್ರಮ್ಮ, ಸಹ ಕಾರ್ಯದರ್ಶಿಗಳಾದ ಎ.ಜೆ. ಲೋಕೇಶ್, ಜಯಂತಿ, ಮಂಜಪ್ಪ, ಅಶೋಕ್ ಕುಮಾರ್ ಇದ್ದರು.

ಮಾ.2ರಿಂದ ಆನಂದದ ಅನುಭೂತಿ ಶಿಬಿರ

• ಪ್ರಜೋದಯ ವರದಿ

ಹಾಸನ: ನಗರದ ಮಲೆನಾಡು ತಾಂತ್ರಿಕ ಕಾಲೇಜು ಸಭಾಂಗಣದಲ್ಲಿ ಮಾ.2 ರಿಂದ 7ರ ವರೆಗೆ ಆನಂದದ ಅನುಭೂತಿ ಶಿಬಿರ ಆಯೋಜಿಸಲಾಗಿದೆ ಎಂದು ಆರ್ಟ್ ಆಫ್ ಲಿವಿಂಗ್ ಜಿಲ್ಲಾ ಅಭಿವೃದ್ಧಿ ಸಮಿತಿ ಸದಸ್ಯ ಸಿ. ಆರ್.ಪರಮೇಶ್ವರ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಸದಾ ಒತ್ತಡದಲ್ಲಿಯೇ ಇರುವ ವ್ಯಕ್ತಿ ಮಾನಸಿಕ ಹಾಗು ದೈಹಿಕವಾಗಿ ಆರೋಗ್ಯದಿಂದ ಇರಬೇಕೆಂದರೆ ಯೋಗ, ಧ್ಯಾನ, ಪ್ರಾಣಾಯಾಮ, ಸುದರ್ಶನ ಕ್ರಿಯೆ ಯಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಆರ್ಟ್ ಆಫ್ ಲಿವಿಂಗ್ ಮತ್ತು ಲಯನ್ಸ್ ಕ್ಲಬ್ ವತಿಯಿಂದ ಶಿಬಿರ ಆಯೋಜಿಸಲಾಗಿದೆ. ಒಟ್ಟು 3 ವಿಭಾಗವಾಗಿ ಶಿಬಿರ ನಡೆಯಲಿದೆ. ಬೆಳಿಗ್ಗೆ 5.30 ರಿಂದ 8ರ ವರೆಗೆ ಒಂದು, ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರವರೆಗೆ ಹಾಗು ಸಂಜೆ 6ರಿಂದ 8.30ರವರೆಗೆ ಬ್ಯಾಚ್ ಮಾಡಲಾಗಿದೆ ಎಂದರು.

ಈಗಾಗಲೇ 192 ದೇಶಗಳಲ್ಲಿ 80 ಕೋಟಿಗೂ ಹೆಚ್ಚು ಜನರು ಶಿಬಿರದ ಪ್ರಯೋಜನ ಪಡೆದಿ ದ್ದಾರೆ. ಯೋಗ, ಪ್ರಾಣಾಯಾಮದಿಂದ ಹಂತ ಹಂತವಾಗಿ ಆರೋಗ್ಯದಲ್ಲಿ ಸುಧಾರಣೆ ಕಂಡು ಕೊಳ್ಳಬಹುದು. ಶಿಬಿರದಲ್ಲಿ ಪಾಲ್ಗೊಳ್ಳಲು ಬಯಸುವವರು ಮೊ: 9845173779, 91102 56623 ಇಲ್ಲಿಗೆ ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದೆಂದರು.

ಯೋಗ ಶಿಕ್ಷಕ ಜಿ.ಎ.ಸುಬ್ಬುಕೃಷ್ಣ, ಲಯನ್ಸ್ ಕ್ಲಬ್ ವಲಯಾಧ್ಯಕ್ಷ ಹೆಚ್. ಕೆ.ನಾಗೇಶ್, ಸಿ.ಶಿವಸ್ವಾಮಿ, ಹೆಚ್. ವೇದಶ್ರೀ, ಬಿ.ಆರ್.ಚನ್ನಬಸಪ್ಪ, ರಮೇಶ್ ಜಾಲಹಳ್ಳಿ ಇದ್ದರು.

ಬಸವೇಶ್ವರರ ಪ್ರತಿಮೆ ಸ್ಥಾಪನೆಗೆ ಸ್ಥಳ ನಿಗದಿ

• ಪ್ರಜೋದಯ ವರದಿ

ಅರಸೀಕೆರೆ: ತಾಲ್ಲೂಕಿನ ಜನತೆ ಹಾಗೂ ಬಸವ ಅನುಯಾಯಿಗಳ ಬಹು ಅಪೇಕ್ಷಿತ ಜಗ ಜ್ಯೋತಿ ಬಸವೇಶ್ವರರ ಪ್ರತಿಮೆ ಸ್ಥಾಪನೆಗೆ ಕಾಲ ಕೂಡಿ ಬಂದಿದ್ದು ಬಸವ ಜಯಂತಿಯೊಳಗೆ ನಗರದ ಪಿ.ಪಿ. ವೃತ್ತದ ಬಳಿ ಕಂಚಿನ ಅಶ್ವರೂಢ ಬಸವೇಶ್ವರರ ಪುತ್ಥಳಿಯನ್ನು ಲೋಕರ್ಪಣೆ ಮಾಡಲಾಗುವುದೆಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಹೇಳಿದರು.

ವೀರಶೈವ ಲಿಂಗಾಯತ ಸಮಾಜದ ಮುಖಂಡರು ಸೇರಿ ಬಸವ ಅನುಯಾಯಿಗಳ ಒಡಗೂಡಿ ರಾಜ್ಯ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ಹಾಗೂ ರೈಲು ನಿಲ್ದಾಣದ ರಸ್ತೆಗೆ ಹೊಂದಿ ಕೊಂಡಂತೆ ಬಸವೇಶ್ವರ ಪ್ರತಿಮೆ ಸ್ಥಾಪನೆಗೆ ಸೋಮವಾರ ಬೆಳಿಗ್ಗೆ ಸ್ಥಳ ನಿಗದಿ ಪಡಿಸಿದ ಬಳಿಕ ಮಾತನಾಡಿದ ಶಾಸಕರು, ಮಹಾ ಮಾನವತಾವಾದಿ ಬಸವಣ್ಣ ಅವರ ವಚನಗಳು ನಮ್ಮೆಲ್ಲರಿಗೂ ದಾರಿದೀಪವಾಗಿದೆ. ಬಸವಣ್ಣ ಅವರ ಪ್ರತಿಮೆ ಸ್ಥಾಪನೆಯ ಜೊತೆಗೆ ನೂತನವಾಗಿ ನಿರ್ಮಾಣ ಗೊಳ್ಳುತ್ತಿರುವ ಬಸ್ ನಿಲ್ದಾಣಕ್ಕೂ ಸಹ ಬಸವಣ್ಣ ಅವರ ಹೆಸರನ್ನು ಇಡಲಾಗುವುದೆಂದು ಘೋಷಿಸಿದರು.

ಬೆಂಗಳೂರು ಹಾಗೂ ಬಸವ ಕಲ್ಯಾಣದಲ್ಲಿ ಇರುವಂತೆಯೇ ಕಂಚಿನ ಬೃಹತ್ ಗಾತ್ರದ ಅಶ್ವರೂಢ ಬಸವಣ್ಣವರ ಪ್ರತಿಮೆ ಸ್ಥಾಪನೆಗೆ ಈಗಾಗಲೇ 40 ಲಕ್ಷ ರೂ. ಅನುದಾನವನ್ನು ಸರ್ಕಾರ ನೀಡಿದ್ದು ಬಸವಣ್ಣನ ಅನುಯಾಯಿಗಳು, ನಾವು ಸಹ ಪ್ರತಿಮೆ ನಿರ್ಮಾಣಕ್ಕೆ ಕೈ ಜೋಡಿಸುತ್ತೇವೆಂದು ಮುಂದೆ ಬಂದಿರುವುದರಿಂದ ಅವರ ತನು ಮನ ದನ ಸಹಕಾರದ ಜೊತೆಗೆ ಇನ್ನೂ ಅಗತ್ಯ ಎನಿಸಿದರೆ ಹೆಚ್ಚುವರಿ ಅನುದಾನವನ್ನು ಸಹ ಸರ್ಕಾರದಿಂದ ಮಂಜೂರು ಮಾಡಿಸಿಕೊಂಡು ಬರುವುದಾಗಿ ಭರವಸೆ ನೀಡಿದರು.

ವೀರಶೈವ ಲಿಂಗಾಯತ ಸಮಾಜದ ಮುಖಂಡರಾದ ಗಂಜಿಗೆರೆ ಚಂದ್ರಶೇಖರ್ ಅವರು ಮಾತನಾಡಿ, ತಾಲ್ಲೂಕಿನ ಜನತೆಯ ದಶಕಗಳ ಕನಸು ಶಾಸಕರ ಇಚ್ಛಾಶಕ್ತಿಯಿಂದಾಗಿ ಇಂದು ಸಹಕಾರ ರೂಪಗೊಳ್ಳುತ್ತಿದೆ. ಬಸವಣ್ಣನವರ ಪ್ರತಿಮೆ ಸ್ಥಾಪನೆಗೆ ಈಗ ನಿಗದಿಪಡಿಸುತ್ತಿರುವ ಸ್ಥಳ ಸೂಕ್ತವಾಗಿದ್ದು, ರೈಲು ಮತ್ತು ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತೆ ಇರುವುದರಿಂದ ಈ ಭಾಗದಲ್ಲಿ ಸಂಚರಿಸುವವರಿಗೆ ಜಗಜ್ಯೋತಿ ಬಸವೇಶ್ವರರ ದರ್ಶನ ಭಾಗ್ಯ ದೊರೆಯುವಂತಾಗುತ್ತಿರುವುದು ಸಂತಸದ ವಿಷಯವೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶಶಿಧರ್, ಹೇಮಾವತಿ ಶುಗರ್ ಕಾರ್ಖಾನೆಯ ನಿರ್ದೇಶಕ ಮಲ್ಲೇನಹಳ್ಳಿ ಶಿವಶಂಕರ ಸ್ವಾಮಿ, ವೀರಶೈವ ಲಿಂಗಾಯತ ಸಮಾಜದಮುಖಂಡರಾದ ಕಾಟೀಕೆರೆ ಉಮೇಶ್, ಮುರುಂಡಿ ಶಿವಯ್ಯ, ದಿವಾಕರ್, ಮಂಜಣ್ಣ, ದುಮೇನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಗಿರೀಶ್, ಕೃಷ್ಣ, ಗಿಜಿಯಲ್ಲಿ ಗ್ರಾಮ ಪಂಚಾಯಿತಿ ಮಾಜಿಅಧ್ಯಕ್ಷ ಧರ್ಮೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷೆ ಮಂಜುಳಾಬಾಯಿ, ರೈತ ಸಂಘದ ಮುಖಂಡ ದಯನಂದ್, ಪುರಸಭೆ ಮಾಜಿ ಸದಸ್ಯರಾದ ಸುಬ್ರಮಣ್ಯ ಬಾಬು, ಉಮಾಶಂಕರ್ ಇತರರು ಉಪಸ್ಥಿತರಿದ್ದರು.

ಹೇಮಾವತಿ ಜಲಾಶಯ ಆವರಣದಲ್ಲಿ ಬೃಂದಾವನ ನಿರ್ಮಿಸಿ

• ಪ್ರಜೋದಯ ವರದಿ

ಹಾಸನ: ಗೊರೂರಿನ ಹೇಮಾವತಿ ಜಲಾಶಯ ಮುಂಭಾಗ ಕೆಆರ್‌ಎಸ್ ಅಣೆಕಟ್ಟು ಮಾದರಿ ಯಲ್ಲಿ ಬೃಂದಾವನ ನಿರ್ಮಿಸಲು ಬಜೆಟ್‌ನಲ್ಲಿ ಅನುದಾನ ಘೋಷಿಸಬೇಕೆಂದು ಗೊರೂರು ಬೃಂದಾವನ ಹೋರಾಟ ಸಮಿತಿ ಅಧ್ಯಕ್ಷ ಹೇಮರಾಜು ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಹೇಮಾವತಿ ಜಲಾಶಯ ಹಾಸನ ಮಾತ್ರ ವಲ್ಲದೆ ಪಕ್ಕದ ತುಮಕೂರು, ಮಂಡ್ಯ ಜಿಲ್ಲೆಯ ಜೀವನಾಡಿಯಾಗಿದೆ. ಇಲ್ಲಿ ಬೃಂದಾವನ ನಿರ್ಮಿಸುವ ಬೇಡಿಕೆ ದಶಕಗಳಿಂದ ಇದೆ. 2025ರ ಡಿ.6ರಂದು ಹಾಸನದಲ್ಲಿ ನಡೆದ ಕಾರ್ಯ ಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಆರ್ ಎಸ್ ಮಾದರಿಯಲ್ಲಿ ಬೃಂದಾವನ ನಿರ್ಮಿಸುವುದಾಗಿ ಭರವಸೆ ನೀಡಿದ್ದಾರೆ. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 500 ಕೋಟಿ ರೂ. ಅನುದಾನ ಮೀಸಲಿಟ್ಟು ಯೋಜನೆ ಕಾರ್ಯಗೊಳಿಸಬೇಕೆಂದು ಆಗ್ರಹಿಸಿದರು.

ಹೇಮಾವತಿ ಜಲಾಶಯ ನೀರಾವರಿ ಉದ್ದೇಶದಿಂದ ಮಾತ್ರವಲ್ಲದೆ ಪ್ರವಾಸಿ ದೃಷ್ಟಿ ಯಿಂದಲೂ ಪ್ರಶಸ್ತ ಸ್ಥಳವಾಗಿದೆ. ಪ್ರತಿವರ್ಷ ಕ್ರಸ್ಟ್‌ಗೇಟ್ ಮೂಲಕ ನೀರು ಹರಿಸುವಾಗ ಸಾವಿರಾರು ಜನರು ಜಲಧಾರೆ ವೀಕ್ಷಣೆಗೆ ಬರುತ್ತಾರೆ. ಗೊರೂರು, ಶೆಟ್ಟಿಹಳ್ಳಿ, ಹಾಲುವಾಗಿಲು ಕಟ್ಟೆ ಹೀಗೆ ಸಮೀಪದ ಪ್ರವಾಸಿ ತಾಣಕ್ಕೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಆಕರ್ಷಕ ಬೃಂದಾವನ ನಿರ್ಮಿಸಿದರೆ ಸ್ಥಳೀಯರಿಗೆ ಅನುಕೂಲವಾಗುತ್ತದೆಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಜಗದೀಶ್, ಬಂಗಾರಿಗೌಡ, ಮಲ್ಲೇಶ್, ಲಿಂಗರಾಜು ಇತರರು ಇದ್ದರು.

ಅರೇಹಳ್ಳಿ ಹಳ್ಳಿಸಂತೆ ಮಾರುಕಟ್ಟೆ ಪ್ರಾರಂಭ

» ಮೊದಲನೇ ಪುಟದಿಂದ

ಅರೇಹಳ್ಳಿ ಪಟ್ಟಣದ ಸಂತೆ ಮೈದಾನದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕೆ. ಆರ್.ಐ.ಡಿ.ಎಲ್ ಯೋಜನೆಯಡಿ ಸುಮಾರು 52 ಲ. ರೂ. ವೆಚ್ಚದಲ್ಲಿ ನಿರ್ಮಿಸಲಾದ ಹಳ್ಳಿಸಂತೆ ಮಾರು ಕಟ್ಟೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ಸೋಮವಾರ ನಡೆಯುವ ವಾರದ ಸಂತೆಗೆ ವಿವಿಧ ಭಾಗಗಳಿಂದ ಬರುವ ರೈತರು, ಕಾರ್ಮಿಕರು ಹಾಗು ವ್ಯಾಪಾರಸ್ಥರು ಬೀದಿಬದಿಯಲ್ಲಿನ ಕೊಳಚೆ ಮತ್ತು ಧೂಳಿನಿಂದಾಗಿ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಇದೀಗ ಮೇಲ್ಛಾವಣಿಯೊಂದಿಗೆ ನಿರ್ಮಿಸಲಾದ ಈ ಮಾರುಕಟ್ಟೆಯಲ್ಲಿ ಆರೋಗ್ಯಕರ ಹಾಗು ವ್ಯವಸ್ಥಿತ ರೀತಿಯಲ್ಲಿ ವಹಿವಾಟು ನಡೆಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಈ ಕಟ್ಟಡದ ಕಾಮಗಾರಿ ಕೈಗೆತ್ತಿಕೊಂಡ ಕ್ಷಣದಿಂದ ನಿವೇಶನಕ್ಕೆ ಸಂಬಂಧಿಸಿದಂತೆ ನಾನಾ ರೀತಿಯ ವಾದ-ವಿವಾದಗಳು ಮತ್ತು ತೊಂದರೆಗಳು ಎದುರಾಗಿದ್ದವು. ಆದರೆ, ಸ್ಥಳೀಯ ಹಲವು ಮುಖಂಡರು ಹಾಗು ಪಕ್ಷ ಭೇದವಿಲ್ಲದೆ ಸಹಕರಿಸಿದ ಪಂಚಾಯಿತಿ ಸದಸ್ಯರ ಸಹಕಾರದಿಂದ ದೊಡ್ಡ ಸಮಸ್ಯೆಗಳನ್ನು ಎದುರಿಸಿ, ಅಂತಿಮವಾಗಿ ಇಂದು ಸಾರ್ವಜನಿಕರ ಬಳಕೆಗೆ ಅನಾವರಣ ಗೊಂಡಿರುವುದು ಸಂತೋಷದ ಸಂಗತಿ ಎಂದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಚಂದ್ರಯ್ಯ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸಂಕಪ್ಪ, ಸಹಾಯಕ ಇಂಜಿನೀಯರ್ ಎಂ.ನವ್ಯಶ್ರೀ, ಮುಖಂಡರಾದ ಸೋಮನಾಥ್, ಕಡೇಗರ್ಜೆ ವಿಜಯರಾಜ್, ವಾಟೆಹಳ್ಳಿ ಚಂದ್ರಶೆಟ್ಟಿ, ಮಹೇಶ್ ಶೆಟ್ಟಿ, ಬಿ.ಪಿ. ಬಸವರಾಜ್, ವೀರೇಶ್ ಇತರರಿದ್ದರು.

ಒಳ ಮೀಸಲಾತಿ ಗೊಂದಲ ಸರಿಪಡಿಸಲು ಆಗ್ರಹ

» ಮೊದಲನೇ ಪುಟದಿಂದ

ಸಂಬಂಧ ಪರಿಶಿಷ್ಟ ಜಾತಿ ಇತರೆ ಸಮುದಾಯದವರಿಗೂ ಉದ್ಯೋಗ ನೇಮಕಾತಿಯಲ್ಲಿ ಸಮಸ್ಯೆಯಾಗಿದ್ದು, ವಯೋಮಿತಿ ಮೀರಿದ ಅಭ್ಯರ್ಥಿಗಳು ಸಂಕಷ್ಟ ಎದುರಿಸುತ್ತಿದ್ದಾರೆ ಎಂದರು.

ರಾಜ್ಯ ಸರ್ಕಾರ 2025 ಸೆ.3 ರಂದು ಯಾವುದೇ ಮಾನದಂಡ ಅನುಸರಿಸದೇ ಅವೈಜ್ಞಾನಿಕವಾಗಿ ಹೊರಡಿಸಿರುವ ಮೀಸಲಾತಿ ಆದೇಶ ಪರಿಷ್ಕರಿಸಬೇಕು. ಸರ್ಕಾರ ನಿಗದಿಪಡಿಸಿರುವ ರೋಸ್ಟರ್ ಬಿಂದುವಿನಲ್ಲಿ 7ನೇ ಬಿಂದುವಿನ ಬದಲು 9ನೇ ಬಿಂದುವಿಗೆ, 14ರ ಬಿಂದುವಿನ ಬದಲು 15ನೇ ಬಿಂದುವಿಗೆ, 21ನೇ ಬಿಂದುವಿನ ಬದಲು 23ನೇ ಬಿಂದುವಿಗೆ ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ. ಈ ಆದೇಶದಲ್ಲಿ ಪರಿಶಿಷ್ಟ ಜಾತಿಗೆ ಶೇ.17ರಷ್ಟು ನಿಗದಿಯಾಗಿರುವ ಮೀಸಲಾತಿ ಪ್ರಮಾಣದಿಂದ ಶೇ.100ನ್ನು ಭಾಗಿಸಿದಾಗ 5.88 ಬರುತ್ತಿದ್ದು, 6ನೇ ಬಿಂದು ಪರಿಶಿಷ್ಟ ಜಾತಿಗೆ ನಿಗದಿಯಾಗಿರುವುದು ನಿಯಮವಾಗಿದೆ. ಆದರೆ ಈ ಆದೇಶದಲ್ಲಿ 1ನೇ ಬಿಂದುವಿನ ನಂತರ 9ನೇ ಬಿಂದು, 15ನೇ ಬಿಂದು, 23ನೇ ಬಿಂದು ಹೀಗೆ ಮುಂದೂಡಿ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಿರುವುದು ಆಕ್ರಮ, ಅನ್ಯಾಯ ಹಾಗೂ ಕಾನೂನು ಬಾಹಿರ ಕ್ರಮವಾಗಿದೆ ಎಂದು ದೂರಿದರು.

ಈ ಆದೇಶ ಮಾರ್ಪಡಿಸಿ ವೈಜ್ಞಾನಿಕವಾಗಿ ಮೀಸಲಾತಿ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಿರುವುದು ಅನ್ಯಾಯ ಹಾಗು ಕಾನೂನು ಬಾಹಿರ ಕ್ರಮವಾಗಿದೆ. ಆದ್ದರಿಂದ ಒಳ ಮೀಸಲಾತಿಯಲ್ಲಿರುವ ಗೊಂದಲ ನಿವಾರಿಸಿ ಅಲ್ಲಿರುವ ಸಮಸ್ಯೆಗಳನ್ನು ಪರಿಗಣಿಸಿ ರಾಜ್ಯ ಸರ್ಕಾರವು ಮೀಸಲಾತಿ ಗೊಂದಲ ಮುಗಿದು, ನ್ಯಾಯಾಲಯದ ಅಡೆತಡೆ ನಿವಾರಣೆಯಾಗುವವರೆಗೆ ಹಳೆ ಮೀಸಲಾತಿಯನ್ನೇ ಮುಂದುವರೆಸಬೇಕೆಂದು ಒತ್ತಾಯಿಸಿ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಉಪಾಧ್ಯಕ್ಷ ಜಯದೇವಯ್ಯ, ಪ್ರಧಾನ ಕಾರ್ಯದರ್ಶಿ ಜವರಯ್ಯ ಇತರರಿದ್ದರು.

ಅಮೇರಿಕಾ ಸಾಮ್ರಾಜ್ಯಶಾಹಿ ಧೋರಣೆಗೆ ಪ್ರತಿರೋಧ ಅವಶ್ಯ

• ಪ್ರಜೋದಯ ವರದಿ

ಹಾಸನ: ಸುಂಕ ಏರಿಸುವ ಅಮೇರಿಕಾದ ನೀತಿಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಅದಕ್ಕೆ ಪ್ರಬಲವಾದ ಪ್ರತಿರೋಧ ಒಡ್ಡುವ ಮೂಲಕ ನಮ್ಮತನವನ್ನು ಉಳಿಸಿಕೊಳ್ಳಲು ಸಾಧ್ಯ. ಇಲ್ಲದಿದ್ದರೆ ಅಮೇರಿಕಾ ಸಾಮ್ರಾಜ್ಯಶಾಹಿ ಜಗತ್ತಿನ ಎಲ್ಲಾ ಸಂಪತ್ತನ್ನು ಲೂಟಿ ಮಾಡಲು ತನ್ನ ಮಿಲಿಟರಿ ಶಕ್ತಿಯನ್ನು ಬಳಸುತ್ತದೆ ಎಂದು ಲೇಖಕ ಕೆ.ಎಸ್.ರವಿಕುಮಾರ್ ಅವರು ಕಳವಳ ವ್ಯಕ್ತಪಡಿಸಿದರು.

ನಗರದ ಶ್ರಮಾ ಕಚೇರಿಯಲ್ಲಿ ಎನ್.ಕೆ.ವಸಂತ್ ರಾಜ್ ರಚಿಸಿರುವ ಯು.ಎಸ್.ಸಾಮ್ರಾಜ್ಯಶಾಹಿ ಭಾರತದ ಜನತೆಯ ಶತ್ರು ಎಂಬ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕಾಗಿ ಜಗತ್ತಿನ ಇತರೆ ದೇಶಗಳ ಮೇಲೆ ದಾಳಿ ಮಾಡುವ ಅಮೇರಿಕಾ, ಹಲವು ಕ್ಷೇತ್ರಗಳಲ್ಲಿ ಕೊಡುಗೆ ಕೊಟ್ಟಿದೆ. ಅಲ್ಲಿರುವ ವಿದೇಶಾಂಗ ನೀತಿ ಮತ್ತು ಮಿಲಿಟರಿ ನೀತಿಗಳು ಸಂಪೂರ್ಣವಾಗಿ ಆ ದೇಶದ ಕಾರ್ಪೊರೇಟ್ ಕಂಪನಿಗಳ ಲಾಭಕ್ಕಾಗಿ ಮಾತ್ರ ಎಂಬಂತಿದೆ ಎಂದರು.

ಅಮೇರಿಕಾವನ್ನು ಪ್ರತಿರೋಧಿಸುವ ಜಗತ್ತಿನ ಇತರೆ ದೇಶಗಳ ಮೇಲೆ ಅಮೇರಿಕಾ ತನ್ನ ಮಿಲಿಟರಿ ದಾಳಿ ನಡೆಸಿ ಆ ದೇಶದ ಆರ್ಥಿಕತೆಯನ್ನು ಸಂಪೂರ್ಣ ದಿವಾಳಿ ಎಬ್ಬಿಸಿ, ವೆನುಜುವೆಲಾದ ಅಧ್ಯಕ್ಷ ಮತ್ತು ಆತನ ಹೆಂಡತಿಯನ್ನು ಅಪಹರಿಸಿದಂತೆ, ಹಿಂದೆ ಸದ್ದಾಂ ಹುಸೇನನ್ನು ಕೊಂದಂತೆ ಮಾಡುತ್ತದೆ. ಪ್ರತಿ ಸಂದರ್ಭದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಅಮೇರಿಕಾಗೆ ಸವಾಲಾಕುವ ಶಕ್ತಿಯನ್ನು ಬೆಳೆಸಿಕೊಂಡಿರುವುದು ಚೈನಾ ಮಾತ್ರ. ಜಗತ್ತಿನ ಇತರೆ ಎಲ್ಲಾ ದೇಶಗಳು ಒಟ್ಟಾಗಿ ಅಮೇರಿಕಾದ ಈ ನೀತಿಗಳನ್ನು ಹಿಮ್ಮೆಟ್ಟಿಸಲು ಕ್ಯೂಬಾದಂತಹ ಸ್ವಾಭಿ ಮಾನದ ಹೋರಾಟವನ್ನು ಕಟ್ಟುವ ಅನಿವಾರ್ಯತೆ ಜಗತ್ತಿನ ಮುಂದಿದೆ ಎಂದು ಹೇಳಿದರು.

ವಿದ್ಯಾರ್ಥಿ ಮುಖಂಡ ವಿವೇಕ್ ಮಾತನಾಡಿ, ಅಮೇರಿಕಾ ಭಾರತದ ಜನತೆಯ ಶತ್ರು ಮಾತ್ರವಲ್ಲಾ, ಜಗತ್ತಿನ ಎಲ್ಲಾ ದುಡಿಯುವ ಜನರ ಶತ್ರುವಾಗಿ ಪರಿವರ್ತನೆಯಾಗುತ್ತಿದೆ ಮತ್ತು ಅದು ಸಾಮ್ರಾಜ್ಯಶಾಹಿಯಾಗಿ ಬೆಳೆದಿದೆ. ಹಲವು ವರ್ಷಗಳ ಹಿಂದೆ ಲೆನಿನ್ ಅವರು ಸಾಮ್ರಾಜ್ಯ ಶಾಹಿ ಎಂದು ಹೇಳಿದ್ದು, ಮೊದಲಿಗೆ ನಾವು ಬಂಡವಾಳಶಾಹಿ ವ್ಯವಸ್ಥೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಮಾತ್ರ ಇಂದಿನ ಸಾಮ್ರಾಜ್ಯಶಾಹಿ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ ಎಂದರು.

ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಆರ್.ನವೀನ್‌ಕುಮಾರ್ ಅವರು ಮಾತನಾಡಿ, ಅಮೇರಿಕಾ ಸಾಮ್ರಾಜ್ಯಶಾಹಿ ಹೇಗೆ ಬೆಳವಣಿಗೆ ಹೊಂದಿದೆ ಎಂದರೆ, ಅದು ಜಗತ್ತಿನ ಎಲ್ಲಾ ಸಂಪತ್ತಿನ ಒಡೆತನವನ್ನು ತನ್ನ ಕೈಯಲ್ಲಿಟ್ಟುಕೊಳ್ಳಬೇಕು, ಅದಕ್ಕೆ ವಿರೋಧ ವ್ಯಕ್ತಪಡಿಸುವವರ ವಿರುದ್ಧ ಎಂತಹ ಪೈಶಾಚಿಕ ಕೃತ್ಯವನ್ನು ಎಸಗಲು ಅದು ಹಿಂದೆ ಮುಂದೆ ನೋಡುವುದಿಲ್ಲ. ಸರಕುಗಳ ಮೇಲಿನ ಸುಂಕ ಏರಿಸುವ ವಿಚಾರದಲ್ಲಿ ಮತ್ತು ಭಾರತ-ರಷ್ಯಾದಿಂದ ಕಚ್ಚಾ ತೈಲವನ್ನು ಖರೀದಿಸಬಾರದೆಂಬ ವಿಷಯವಾಗಿ ಅಮೇರಿಕಾ ಭಾರತದ ಮೇಲೆ ವಿಧಿಸಿದ ಷರತ್ತು ಮತ್ತು ದಿಗ್ಬಂದನಗಳಿಗೆ ಭಾರತ ಒಕ್ಕೂಟ ಸರ್ಕಾರ ಯಾವ ಪ್ರತಿರೋಧವನ್ನೂ ತೋರದೆ ಅಮೇರಿಕಾಗೆ ಸಂಪೂರ್ಣ ಶರಣಾಗುತ್ತಿದೆಂದು ಹೇಳಿದರು.

ಅಂತರರಾಷ್ಟ್ರೀಯವಾಗಿ ನಡೆಯುತ್ತಿರುವ ಎಲ್ಲಾ ಬೆಳವಣಿಗೆಗಳಿಗೆ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆ ಬಿಕ್ಕಟ್ಟಿನಲ್ಲಿರುವುದನ್ನು ಸೂಚಿಸುತ್ತದೆ. ಈ ಬಿಕ್ಕಟ್ಟಿನಿಂದ ಹೊರಬರಲು ಇತರೆ ದೇಶಗಳ ಮೇಲೆ ಸುಂಕದ ಹೊರೆ ಹಾಕುವುದು ಹಾಗು ಯುದ್ಧಗಳನ್ನು ಸಂಘಟಿಸುತ್ತದೆ ಎಂದರು.

ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಎಂ.ಜಿ.ಪೃಥ್ವಿ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯರ್ಶಿ ಎಂ.ಬಿ.ಪುಷ್ಪ, ಹಿರಿಯ ಪತ್ರಕರ್ತ ಆರ್.ಪಿ. ವೆಂಕಟೇಶಮೂರ್ತಿ, ಪರಮ ಶಿವಯ್ಯ, ಹುಲಿಕಲ್ ರಾಜಶೇಖರ್, ರೋಹಿತ್ ಹಗಸರಹಳ್ಳಿ, ಮಲೆನಾಡು ಮೆಹಬೂಬ್, ಮಂಜು, ಅರವಿಂದ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K C M Y K C M Y K C M Y K